ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 38 ಸೆಪ್ಟಂಬರ್ 21, 1986 ಬೆಲೆ 80 ಪೈಸೆ.

ಒಳಗೇನಿದೆ?....

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಕರೆ

'ಸೆಪ್ಟಂಬರ್ 29 ರಂದು ಬೃಹತ್ ಸಂಖ್ಯೆಯಲ್ಲಿ ವಿಧಾನ ಸೌಧಕ್ಕೆ ಧಾವಿಸಿ'

29–9–86 ರಂದು ರಾಜ್ಯದ ರೈತ ಕೃಷಿ ಕೂಲಿಕಾರರನ್ನು ಬಾಧಿಸುವ ಹತ್ತು ಬೇಡಿಕೆಗಳನ್ನು ಈಡೇರಿಸುವಂತೆ ಶ್ರೀಯುತ ರಾಮಕೃಷ್ಣ ಹೆಗಡೆಯವರ ಜನತಾ ಸರಕಾರಕ್ಕೆ ಒತ್ತಾಯಿಸಲು ಬೃಹತ್ ಸಂಖ್ಯೆಯಲ್ಲಿ ವಿಧಾನಸೌಧಕ್ಕೆ ಧಾವಿಸಲು ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸಮಿತಿ ರಾಜ್ಯದ ರೈತರಿಗೆ ಕರೆ ಕೊಟ್ಟಿದೆ.

ಅದಕ್ಕೆ ತಯಾರಿಯಾಗಿ 50000 ಬ್ಯಾಡ್ಜ್‌ಗಳನ್ನು ಮಾರಾಟ ಮಾಡಲಾಗುತ್ತಿದೆ. ಹತ್ತಾರು ಸಾವಿರ ಪೋಸ್ಟರ್‌ಸ್‌ಗಳನ್ನು ಗೋಡೆಗಳಿಗೆ ಹಚ್ಚಲು ಕಳಿಸಲಾಗಿದೆ. ಲಕ್ಷಾಂತರ ಕರಪತ್ರಗಳನ್ನು ಅಚ್ಚು ಹಾಕಿ ಹಂಚಲಾಗುತ್ತಿದೆ. ರಾಜ್ಯ ವ್ಯಾಪಿ ಕಾರ್ಯಕರ್ತರು ರೈತರನ್ನು ವಿಧಾನಸೌಧಕ್ಕೆ ಕರೆತರುವ ಪ್ರಚಾರ ನಡೆಸಿದ್ದಾರೆ. ಆದರೆ ಬಂಡವಾಳಶಾಹಿ ಪತ್ರಿಕೆಗಳು ಈ ಕುರಿತು ಮೌನ ತಾಳಿವೆ. ಪತ್ರಿಕಾ ಸಮ್ಮೇಳನ ನಡೆಸಲಾಗಿದೆ, ಪತ್ರಿಕಾ ಹೇಳಿಕೆಗಳನ್ನು ಕೊಡಲಾಗಿದೆ. ಆದರೂ ಹೆಚ್ಚಿನ ಪತ್ರಿಕೆಗೆಳಲ್ಲಿ ಪ್ರಚಾರ ಬಂದಿಲ್ಲ. ಹಾಗಾದರೆ ವಿಧಾನಸೌಧಕ್ಕೆ ರೈತರು ತಮ್ಮ ಬೇಡಿಕೆಗಳನ್ನು ಒತ್ತಾಯಿಸಲು ಬರುವುದಿಲ್ಲವೇ?

ಹಾಗೇನಿಲ್ಲ ಬರುತ್ತಾರೆ. ಆದರೆ ರಾಜ್ಯದಲ್ಲಿ ಕೋಟಿಗಟ್ಟಲೆ ರೈತ–ಕೃಷಿ ಕೂಲಿಕಾರರಿದ್ದು, ಸ್ವಾತಂತ್ರ್ಯ ನಂತರದ ಗುತ್ತೇದಾರಿ, ಬಂಡವಾಳಶಾಹಿ-ಭೂಮಾಲೀಕ ನೀತಿಯಿಂದಾಗಿ ಬೆಳೆದ ಮಾಲಿಗೆ ಬೆಲೆಯಿಲ್ಲದೆ ಕೈಗಾರಿಕಾ ವಸ್ತುಗಳ ಬೆಲೆ ಗಗನಕ್ಕೇರುತ್ತಿದ್ದು ಭೂ ಸಂಬಂಧಗಳು ಬದಲಾವಣೆಯಾಗದೆ ಹೋಗಿವೆ. ಇದರಿಂದಾಗಿ ನೂರಕ್ಕೆ ಹತ್ತರಷ್ಟಿದ್ದ ಕೃಷಿ ಕೂಲಿಕಾರ ಬಡರೈತರ ಸಂಖ್ಯೆ ಇಂದು ನೂರಕ್ಕೆ ಎಪ್ಪತ್ತಕ್ಕೇರಿದೆ. ಜೊತೆಗೆ ಮಧ್ಯಮ ರೈತರು, ಶ್ರೀಮಂತ ರೈತರೂ ಸಹ ಬಂಡವಾಳಶಾಹಿ ದಬ್ಬಾಳಿಕೆಗೆ ತತ್ತರಿಸಿ ಹೋಗಿದ್ದಾರೆ. ಇನ್ನೊಂದೆಡೆ ಬರಗಾಲ ಮಹಾಪೂರಗಳಿಂದ ಕನಿಷ್ಠ ರಕ್ಷಣೆಯನ್ನು ಒದಗಿಸಲಾಗಿಲ್ಲ, ಇಷ್ಟೆಲ್ಲಾ ಅತೃಪ್ತಿಯಿಂದ ಕುದಿಯುತ್ತಿರುವ ಎರಡು ಕೋಟಿಗೂ ಮಿಕ್ಕಿದ ರಾಜ್ಯದ ರೈತರಲ್ಲಿ ಒಂದೆರೆಡು ಲಕ್ಷ ರೈತ–ಕೃಷಿ ಕೂಲಿಕಾರರು ಮಾತ್ರ ಸಂಘಟಿತರಾಗಿದ್ದಾರೆ. ಉಳಿದ ರೈತರು ಸಂಘಟಿತರಾಗಿ ಹೋರಾಟದ ಹಾದಿಯನ್ನು ಹಿಡಿಯದಂತೆ ತಡೆಯಲು ಗ್ರಾಮಾಂತರ ಪ್ರದೇಶದ ಮೂಲೆ ಮೂಲೆಗಳಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿಗಳಿಂದ ಪ್ರಚೋದಿತ ಸಂಘಟನೆಗಳು, ಕ್ರಿಶ್ಚಿಯನ್ ಮಿಶಿನರಿಗಳು, ಜಾತಿ, ಕೋಮು, ಧಾರ್ಮಿಕ ಸಂಘ ಸಂಸ್ಥೆಗಳು, ದಲಿತ ಸಂಘ, ಇತರ ಸಂಘರ್ಷ ಸಮಿತಿಗಳು ಮೀಸಲಾತಿ ಪರ-ವಿರೋಧಿ ಚಳುವಳಿಗಳು, ಭಾಷಾ ಪರ, ವಿರೋಧಿ ಚಳುವಳಿಗಳು ದೊಡ್ಡಮಟ್ಟದಲ್ಲಿ ರೈತ-ಕೃಷಿಕೂಲಿಕಾರ, ಕಾರ್ಮಿಕ, ದುಡಿಯುವ ಜನ ವಿಭಾಗಗಳನ್ನು ತಮ್ಮ ಬೇಡಿಕೆಗಳಿಗಾಗಿ ಒಂದಾಗದಂತೆ ಮಾಡಲು ಛಿದ್ರ ಛಿದ್ರ ಗೊಳಿಸುವ ಎಲ್ಲಾ ಪ್ರಯತ್ನ ಮಾಡುತ್ತಿವೆ. ಜನರ ಹೋರಾಟದ ದೊಣ್ಣೆಯ ಏಟನ್ನು ತಪ್ಪಿಸಿಕೊಂಡು ಅಧಿಕಾರ ಉಳಿಸಿಕೊಳ್ಳಲು ಆಳುವ ಬಂಡವಾಳ -ಭೂಮಾಲೀಕ ವರ್ಗದ ಪಕ್ಷಗಳು ಇಂತಹ ವಿಚ್ಛಿದ್ರಕಾರಿ ಶಕ್ತಿಗಳಿಗೆ ಕುಮ್ಮಕ್ಕು ಕೊಡುತ್ತಿದೆ ಎಂಬದನ್ನು ದೃಷ್ಟಿಯಲ್ಲಿಟ್ಟುಕೊಂಡು ರೈತರ ಚಳುವಳಿಯನ್ನು ನಡೆಸುವ ಹಾದಿಯಲ್ಲಿ ಇಂದು ವಿಧಾನ ಸೌಧ ಚಲೋ ಕಾರ್ಯಕ್ರಮ ರೂಪಿಸಲಾಗಿದೆ.

ವಿಧಾನ ಸೌಧಕ್ಕೆ ಬರುವ ಸಂಘಟಿತ ರೈತರು ರಾಜ್ಯದ ರೈತರ–ಕೃಷಿ ಕೂಲಿಗಾರರ ಪ್ರತಿನಿಧಿಗಳಾಗಿ ಅವರೆಲ್ಲರ ಸಮಗ್ರ ಅತೃಪ್ತಿಯ ಪ್ರತೀಕವಾಗಿ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸುವಾಗ ರಾಜ್ಯದ ಸಮಗ್ರ ರೈತರ ಮಧ್ಯೆ ವಿಧಾನ ಸೌಧಕ್ಕೆ ಹೋಗುವ ರೈತರ ಕುರಿತು, ತಮ್ಮ ನೋವು, ಅತೃಪ್ತಿ, ಬೇಡಿಕೆಗಳ ಕುರಿತು ಚರ್ಚಿಸುವಂತಾಗಬೇಕು. ಆಗ ಮಾತ್ರ ಅಸಂಘಟಿತ ಕೋಟ್ಯಾಂತರ ರೈತರನ್ನು ಬಡಿದೆಬ್ಬಿಸಲು, ಆಳುವ ವರ್ಗವನ್ನು ಅಲ್ಲಾಡಿಸಲು ಸಾಧ್ಯವಾಗುತ್ತದೆ.

ಆ ಮಟ್ಟದ ಎಚ್ಚರಿಕೆಯನ್ನು ತರಬೇಕಾದಲ್ಲಿ, ಗ್ರಾಮ, ತಾಲ್ಲೂಕ್, ಜಿಲ್ಲಾ ಕೇಂದ್ರಗಳಲ್ಲಿ ಬಹಿರಂಗ ಸಭೆ, ಜಾತಾ, ಸೈಕಲ್ ಜಾತಾ, ಗೋಡೆ ಬರಹ, ಬಸ್‌ಗಳ ಮೇಲೆ ಬರಹ ವ್ಯಾಪಕ ಪ್ರಚಾರವನ್ನು ಮಾಡಲು ಸಾಧ್ಯವಾದರೆ ರೈತಾಪಿ ಜನಕೋಟಿಯನ್ನು ವಿಚ್ಛಿದ್ರಕಾರಿ ಏಜೆಂಟರಿಂದ ಜಾತಿ, ಕೋಮು ಸಂಘಗಳ ಪ್ರಭಾವದಿಂದ, ಸರಿಯಾದ ದಿಕ್ಕಿನಲ್ಲಿ, ರೈತ, ಕೃಷಿಕಾರ ವರ್ಗವಾಗಿ, ವರ್ಗ ದೃಷ್ಟಿಕೋನದಲ್ಲಿ ಚರ್ಚಿಸಲು ಸಂಘಟಿತರಾಗಲು ಹೋರಾಟದ ಹಾದಿ ಹಿಡಿಯುವಂತೆ ಮಾಡಲು ಸಾಧ್ಯವಾಗುತ್ತದೆ. ಆಗ ವಿಧಾನ ಸೌಧ ಕಾರ್ಯಕ್ರಮ ಯಶಸ್ವಿಯಾದೀತು.

'ರೈತ – ಕಾರ್ಮಿಕರ ಐಕ್ಯತೆ ಪ್ರದರ್ಶಿಸಿ'

– ಸಿ. ಐ. ಟಿ. ಯು. ಕರೆ

ರಾಜ್ಯ ಸಿ.ಐ.ಟಿ.ಯು. ಪದಾಧಿಕಾರಿಗಳು 18. 9. 86 ರಂದು ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಸೆ.29 ರಂದು ರೈತರ ವಿಧಾನ ಸೌಧ ಚಲೋ ಕಾರ್ಯಕ್ರಮದಲ್ಲಿ ಬಾಗವಹಿಸುವ, 30,000 ಕ್ಕೂ ಹೆಚ್ಚು ರೈತರಿಗೆ ಕಾರ್ಮಿಕರ ಬೆಂಬಲ ನೀಡುವುದಲ್ಲದೆ ರೈತ – ಕಾರ್ಮಿಕರ ಸಖ್ಯತೆಯನ್ನು ಸ್ಥಾಪಿಸುವ ಸಲುವಾಗಿ ಅವರ ರ್‍ಯಾಲಿಯಲ್ಲಿ ಕಾರ್ಮಿಕರು ದೊಡ್ಡ ಪ್ರಮಾಣದಲ್ಲಿ ಭಾಗವಹಿಸುತ್ತಾರೆಂದ್ರು ಕಾ. ಸೂರ್ಯನಾರಾಯಣ ರಾವ್‌ರವರು ತಿಳಿಸಿದ್ದಾರೆ.

ಕಳೆದ ಏಪ್ರಿಲ್ ತಿಂಗಳಲ್ಲಿ ಸ್ವರ್ಣ ಮಹೋತ್ಸವವನ್ನು ಆಚರಿಸಿದ ಆಲ್ ಇಂಡಿಯಾ ಕಿಸಾನ್ ಸಭಾಕ್ಕೆ ಸೇರಿದ ಕರ್ನಾಟಕ ಪ್ರಾಂತ ರೈತ ಸಂಘವು 14 ಅಂಶಗಳ ರೈತರ ಬೇಡಿಕೆಗಳ ಬಗ್ಗೆ ಕರ್ನಾಟಕ ಸರ್ಕಾರವನ್ನು ಒತ್ತಾಯಿಸಲು ಬೆಂಗಳೂರಿನಲ್ಲಿ 29 ರಂದು ರೈತರ ವಿಧಾನ ಸೌಧ ಚಲೋ ಚಳುವಳಿಯನ್ನು ನಡೆಸುತ್ತದೆ.

ವಿಧಾನ ಸೌಧ ಚಲೋ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ರೈತರಿಗೆ ಸಕಲ ರೀತಿಯ ಸಹಾಯವನ್ನು ಮಾಡಬೇಕೆಂದು ಸಿ. ಐ. ಟಿ. ಯು.

(8ನೇ ಪುಟ ನೋಡಿ)

ಕಾ॥ ಬಿ. ನಾರಾಯಣ ನಿಧನ

ಸಿ ಪಿ ಐ (ಎಂ) ರಾಜ್ಯ ಸೆಕ್ರೆಟೆರಿಯೇಟ್ ಸಂತಾಪ

"ಕಳೆದ 45 ವರ್ಷಗಳಿಂದಲೂ ಕಾರ್ಮಿಕರ ಹಾಗೂ ಕಮ್ಯೂನಿಸ್ಟ್ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ, ಮುಖಂಡನಾಗಿ ದುಡಿಯುತ್ತ ಬಂದು ದ. ಕ. ಜಿಲ್ಲೆಯಲ್ಲಿ ಬಲಿಷ್ಠವಾದ ಹಂಚಿನ ಕಾರ್ಮಿಕರ ಸಂಘಟನೆ ಕಟ್ಟಿ ಹೋರಾಡಿದ, ಪರಿಷ್ಕರಣವಾದದ ವಿರುದ್ಧ ಹೋರಾಡಿ. ಬಲಿಷ್ಟ ಸಿ.ಪಿ.ಐ. (ಎಂ) ಪಕ್ಷ ಕಟ್ಟಿದ, 1981 ರವರೆಗೆ ರಾಜ್ಯ ಸಮಿತಿ ಸದಸ್ಯರಾಗಿಯೂ. ರಾಜ್ಯ ಸಿ.ಐ.ಟಿ.ಯು.ವಿನಲ್ಲಿ ಅಧಿಕಾರಿ ಸ್ಥಾನದಲ್ಲಿದ್ದು ಅಪಾರ ಸೇವೆ ಗೈದ, ನಿಷ್ಠಾವಂತ ಮುಖಂಡ ಬಿ.ನಾರಾಯಣ ಅವರ ಅಕಾಲಿಕ ಮರಣಕ್ಕೆ ಸಿ.ಪಿ.ಐ. (ಎಂ) ರಾಜ್ಯ ಸೆಕ್ರೆಟಾರಿಯೇಟ್ ತನ್ನ ಅಪಾರ ದುಃಖ ವ್ಯಕ್ತ ಮಾಡುತ್ತದೆ. ಅವರ ಕುಟುಂಬದವರ ದುಃಖದಲ್ಲಿ ತಾನೂ ಬಾಗಿದಾರನಾಗುತ್ತದೆ" ಎಂಬ ನಿರ್ಣಯವನ್ನು 18–9–86 ರಂದು ಸೇರಿದ್ದ ಸೆಕ್ರೇಟಾರಿಯೇಟ್ ಪಾಸು ಮಾಡಿ ಅಗಲಿದ ಮುಖಂಡನಿಗೆ ಗೌರವ ಸಲ್ಲಿಸಲು 2 ನಿಮಿಷ ಮೌನ ಆಚರಿಸಿತು.

ಸೋವಿಯತ್ ರಶ್ಯದಲ್ಲಿ ಕಾರ್ಖಾನೆ ಕಾರ್ಮಿಕ ಮತ್ತು ಮ್ಯಾನೇಜರ್ ಸಮಾನರು

ಇತ್ತೀಚೆಗೆ ಛಾರಲ್ಸ್ ಆರ್ ಆಲೆನ್ ಎಂಬ ಅಮೇರಿಕದ ಒಬ್ಬ ಪತ್ರಿಕೋದ್ಯಮಿ ಸೋವಿಯತ್ ರಶ್ಯಕ್ಕೆ ಭೇಟಿಇತ್ತಿದ್ದ. ರಶ್ಯದಲ್ಲಿ ಕಾರ್ಮಿಕ ಸಂಘಗಳ ವಿಷಯಗಳನ್ನು ಸಾಧ್ಯವಿದ್ದಷ್ಟು ತಿಳಿಯಬೇಕೆಂಬ ಆಕಾಂಕ್ಷೆ ಅವನಲ್ಲಿತ್ತು ಪೂರ್ವಗ್ರಹ ಪೀಡಿತ ಅಭಿಪ್ರಾಯಗಳನ್ನು ಅವನು ಹೊಂದಿದ್ದವನಾಗಿದ್ದು ಸೋವಿಯತ್ ರಶ್ಯದ ಜನರ ನೈಜ ಚಿತ್ರವನ್ನು ಅಮೇರಿಕದ ಜನರಿಗೆ ತಿಳಿಯಪಡಿಸಬೇಕೆಂಬುದೇ ಅವನ ಯೋಜನೆಯಾಗಿತ್ತು. ರಶ್ಯದ ಕಮ್ಯೂನಿಸ್ಟ್ ಪಾರ್ಟಿಯ ನಿರ್ದೇಶನದಂತೆ ಅಲ್ಲಿಯ ಕಾರ್ಮಿಕ ಸಂಘಗಳು ನಡೆದುಕೊಳ್ಳುತ್ತವೆ, ಅವು ಕಾರ್ಮಿಕರ ಹಿತ ರಕ್ಷಣೆ ಮಾಡುವುದಿಲ್ಲ. ಕಮ್ಯೂನಿಸ್ಟ್ ಪಾರ್ಟಿಗೆ ಅಧೀನವಾಗಿದ್ದು ಸ್ವತಂತ್ರವಾಗಿ ಕಾರ್ಯಾಚರಣೆಯನ್ನು ನಡೆಸುವುದಿಲ್ಲ ಎಂಬ ಎಲ್ಲ ಅಭಿಪ್ರಾಯಗಳನ್ನು ಅವನು ಉಳ್ಳವನಾಗಿದ್ದನು.

ಆಲೆನ್ ಒಂದು ದಿನ ಕಾರ್ಮಿಕ ಸಂಘದ ಸಾಮಾನ್ಯ ಸಭೆಗೆ ಹಾಜರಾದ. ಅಲ್ಲಿ ಕಾರ್ಮಿಕರು ಈ ಕಾರ್ಖಾನೆಯ ಮ್ಯಾನೇಜರ್‌ರವರಿಗೆ "ನೀವು ಕಾಲಕ್ಕೆ ಸರಿಯಾಗಿ ಕಚ್ಚಾಮಾಲನ್ನು ಒದಗಿಸದೆ ಉತ್ಪಾದನೆಯನ್ನು ಕುಂಠಿತಗೊಳಿಸುತ್ತಿದ್ದೀರಿ" ಎಂದು ಟೀಕೆ ಮಾಡುತ್ತಿದ್ದರು. ಮ್ಯಾನೇಜರ್ ಅದನ್ನು ಗಮನವಿಟ್ಟು ಆಲಿಸುತ್ತಿದ್ದ. ಅಷ್ಟೇ ಅಲ್ಲದೆ ಆ ಟೀಕೆಗಳನ್ನು ಒಪ್ಪಿ ಕಾರ್ಖಾನೆಗೆ ಬೇಕಾದ ಕಚ್ಚಾಮಾಲುಗಳನ್ನು ಕಾಲಕ್ಕೆ ಸರಿಯಾಗಿ ಕಾರ್ಖಾನೆಗೆ ಒದಗಿಸುವ ಆಶ್ವಾಸನೆಯನ್ನು ಕೊಡುತ್ತಿದ್ದ. ಇದನ್ನು ಕಣ್ಣಾರೆ ಕಂಡಾಗ ಈ ಪತ್ರಿಕೋದ್ಯಮಿಯ ಅಭಿಪ್ರಾಯಗಳು ಬದಲಾದವು.

ಕಾರ್ಖಾನೆಯ ಆಡಳಿತವೆಂದರೆ ಅದು ತೊಡಕಾದ ಕೆಲಸವೇ ಸರಿ. ಅದರ ಆಡಳಿತಗಾರರು ಕಾರ್ಖಾನೆಯ ಅನೇಕ ವೈಶಿಷ್ಟ್ಯತೆಗಳನ್ನು, ಆರ್ಥಿಕ ನೀತಿಯನ್ನು, ಕಾರ್ಖಾನೆಯ ನಿರ್ಮಾಣದ ನಿಯಮ ನಿಬಂಧನೆಗಳನ್ನು, ಉತ್ಪಾದನಾ ವ್ಯವಸ್ಥೆಗಳನ್ನು ಮತ್ತಿತರ ಸಮಸ್ಯೆಗಳನ್ನು ಅರಿತವರಾಗಿರಬೇಕು. ಒದಗಬಹುದಾದ ಇತರ ಸಮಸ್ಯೆಗಳನ್ನು ಎದುರಿಸುವ, ಬಗೆಹರಿಸುವ ಸಾಮರ್ಥ್ಯವುಳ್ಳವರಾಗಿರಬೇಕು.

ಬಂಡವಾಳಶಾಹಿ ಸಮಾಜದಲ್ಲಿ ಮೇಲೆ ಹೇಳಿದ ಸಮಸ್ಯೆಗಳೆಲ್ಲವೂ ಆ ಕಾರ್ಖಾನೆಯ ಮಾಲೀಕರಿಗೆ ಸೇರಿದ ವಿಷಯಗಳಾಗಿರುತ್ತವೆ. ಈ ಸಮಸ್ಯೆಗಳನ್ನು ಆಡಳಿತಗಾರರೇ ಅಥವ ಮಾಲೀಕರೇ ಎದುರಿಸುತ್ತಾರೆ ತಪ್ಪಿದಲ್ಲಿ ಕೆಲವು ತಜ್ಞರನ್ನು ನೇಮಿಸಿಕೊಳ್ಳುತ್ತಾರೆ.

ಸಮಾಜವಾದಿ ಸಮಾಜದಲ್ಲಿ ಮೇಲೆ ಹೇಳಿದ ಸಮಸ್ಯೆಗಳೆಲ್ಲಾ ಕಾರ್ಖಾನೆಯ ಎಲ್ಲ ಕಾರ್ಮಿಕರಿಗೆ ಸೇರಿದ ಸಮಸ್ಯೆಗಳಾಗಿರುತ್ತವೆ. ಕಾರ್ಖಾನೆಗಳ ಮೇಲ್ವಿಚಾರಣೆಗೆ ನೇಮಿತಗೊಂಡ ಆಡಳಿತಗಾರರು ಮಾಡಬಹುದಾದ ತಪ್ಪುಗಳನ್ನೆಲ್ಲಾ ನೋಡಿಕೊಂಡು ಕಾರ್ಮಿಕರು ಕಂಡೂಕಾಣದ ಹಾಗೆ ಇಲ್ಲಿ ಇರಲಾಗುವುದಿಲ್ಲ. ಸಮಾಜವಾದಿ ಸಮಾಜದಲ್ಲಿ ಎಲ್ಲ ಯಂತ್ರಗಳು, ಕಾರ್ಖಾನೆಗಳು, ಇತರೆ ಸಂಸ್ಥೆಗಳು, ಸಮಾಜದ ಎಲ್ಲ ಜನರಿಗೂ ಸೇರಿದ್ದಾಗಿರುತ್ತವೆ. ಇಲ್ಲಿ ದೊರೆಯುವ ಲಾಭದ ದೊಡ್ಡಪಾಲು ಸಮಾಜದ ಗ್ರಾಹಕರ ನಿಧಿ (ಸೋಶಿಯಲ್ ಕಂಸಂಪ್ಷನ್‌ಫಂಡ್)ಗೆ ಹೋಗುತ್ತದೆ. ಇನ್ನೂ ಸ್ವಲ್ಪ ಪಾಲು ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಗಳನ್ನು ಜರುಗಿಸುವುದಕ್ಕೆ ಮತ್ತು ಮನೆ ಕಟ್ಟುವುದಕ್ಕೆ ಉಪಯೋಗಿಸುವ ಸಲುವಾಗಿ ವಸ್ತು ಪ್ರೇರಕ ನಿಧಿ (ಮೆಟೀರಿಯಲ್ ಇನ್‌ಸೆಂಟೀವ್ಸ್ ಫಂಡ್)ಗೆ ಉಪಯೋಗವಾಗುತ್ತದೆ. ಮತ್ತು ಉತ್ಪಾದನಾಭಿವೃದ್ಧಿಯ ನಿಧಿಗೂ ಕೂಡಿಸಲಾಗುತ್ತದೆ. ಮೊದಲನೆಯ ಎರಡು ನಿಧಿಗಳು ಆಯಾ ಕಾರ್ಖಾನೆಯ ಕಾರ್ಮಿಕರ ಅವಶ್ಯಕತೆಗಳಿಗೇ ಮೀಸಲಾಗಿಟ್ಟಿರುತ್ತದೆ. ವಸತಿಗಳು, ಎಳೆ ಮಕ್ಕಳ ಪಾಲನಾ ಕೇಂದ್ರಗಳು, ಕಾರ್ಮಿಕರಿಗೆ ಅವಶ್ಯಬಿದ್ದಾಗ ಸಹಾಯ ಧನ, ಅತ್ಯುತ್ತಮ ಕೆಲಸಗಳಿಗೆ ಬೋನಸ್ಸು ಇತ್ಯಾದಿ.

ಮೇಲೆ ಹೇಳಿದ ಸೌಲಭ್ಯಗಳಿಂದಾಗಿ ಕಾರ್ಖಾನೆ ಸುಲಲಿತವಾಗಿ ನಡೆಯುವುದರಿಂದ ಕಾರ್ಮಿಕ ತನಗೇ ಹೆಚ್ಚು ಪ್ರಯೋಜನ ಎಂದು ತಿಳಿದಿದ್ದಾನೆ. ಕಾರ್ಖಾನೆಯ ಉತ್ಪಾದನೆಯನ್ನು ಹೆಚ್ಚಿಸಲು ಕಾರ್ಮಿಕ ತನ್ನ ಎಲ್ಲ ಶಕ್ತಿಯನ್ನು ಉಪಯೋಗಿಸುತ್ತಾನೆ, ಲೋಪದೋಷಗಳನ್ನು ಟೀಕೆಗೆ ಒಳಪಡಿಸುವುದು ಒಂದು ವಿಧ ಸೋವಿಯತ್ ರಶ್ಯದಲ್ಲಿ ಕಾರ್ಮಿಕ ಸಂಘಗಳ ಸಮಿತಿಗಳ ಹಕ್ಕು (ರೈಟ್ಸ್ ಆಪ್ ಟ್ರೇಡ್ ಯೂನಿಯನ್ ಕಮಿಟೀಸ್) ಮತ್ತು ಮೂಲಭೂತ ಕಾರ್ಮಿಕ ಕಾಯ್ದೆಗಳು (ಫಂಡಮೆಂಟಲ್ಸ್ ಆಫ್ ಲೇಬರ್ ಲೆಜಿಸ್ಲೇಷನ್) ಎಂಬ ಕಾನೂನುಗಳು ದೇಶಾದ್ಯಂತ ಜಾರಿಯಲ್ಲಿವೆ ಇವು ಕಾರ್ಮಿಕ ಸಂಘಗಳಿಗೆ ಕಾರ್ಖಾನೆಗಳ ಆಡಳಿತವನ್ನು ಮತ್ತು ಕೆಲಸವನ್ನು ಹಿಡಿತದಲ್ಲಿಡುವ ಹಕ್ಕನ್ನೂ ಮತ್ತು ಉತ್ಪಾದನೆಯ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವ ಹಕ್ಕನ್ನೂ ಕೊಟ್ಟಿವೆ.

ಎಂ. ಎನ್. ಉಗ್ರಪ್ಪ

ಸೋವಿಯತ್ ರಶ್ಯದ ಕಾರ್ಖಾನೆಗಳಲ್ಲಿ ಕಾರ್ಮಿಕರ ಮತ್ತು ಸಂಘಗಳ ಸಭೆಗಳು ಸತತವಾಗಿ ನಡೆಯುತ್ತಿರುತ್ತವೆ. ದೊಡ್ಡ ಕಾರ್ಖಾನೆಗಳಲ್ಲಿ ಸಮ್ಮೇಳನಗಳು ನಡೆಯುತ್ತವೆ. ಇವುಗಳನ್ನು ಸಂಘಗಳ ಸಮಿತಿಗಳು ವ್ಯವಸ್ಥೆಗೊಳಿಸುತ್ತವೆ. ಈ ಸಭೆಗಳ ಸಮ್ಮೇಳನಗಳ ತೀರ್ಮಾನಗಳು ಆಡಳಿತಗಾರರಿಗೆ ಮತ್ತು ಕಾರ್ಮಿಕರಿಗೆ ಬಾಧ್ಯಪಟ್ಟದ್ದಾಗಿರುತ್ತವೆ. ಇಲ್ಲಿಯ ಕಾರ್ಖಾನೆಗಳಲ್ಲಿ ಆಡಳಿತಗಾರರ ಸ್ವಹಿತಾಸಕ್ತಿ ಮತ್ತು ಕಾರ್ಮಿಕರ ಸ್ವಹಿತಾಸಕ್ತಿಗಳು ಒಂದಕ್ಕೊಂದು ವಿರುದ್ಧವಾಗಿರುವುದಿಲ್ಲ. ಯಾರೊಬ್ಬರೂ ಮತ್ತೊಬ್ಬರ ಶ್ರಮದಿಂದ ಲಾಭ ಪಡೆಯಬೇಕಾದ್ದಿಲ್ಲ ಅವರ ಸ್ಥಾನ ಮಾನಗಳ, ಕೆಲಸಗಳ ತಾರತಮ್ಯವಿಲ್ಲದೆ ಎಲ್ಲರೂ ಒಂದೇ ಕಾರ್ಮಿಕ ಸಂಘದ ಸದಸ್ಯರಾಗಿರುತ್ತಾರೆ. ಸರ್ವಸಾಮಾನ್ಯದ ಕರ್ತವ್ಯಗಳನ್ನು ಅವರು ಮಾಡಲು ಕಾರ್ಮಿಕ ಸಂಘವು ಸಹಕರಿಸುತ್ತದೆ. ಕಾರ್ಖಾನೆಗಳಲ್ಲಿ ಎಲ್ಲರೂ ಒಂದಿಗೆ ಸ್ಪರ್ಧಿಸುವಂತೆ ಮಾಡುತ್ತದೆ. ಉತ್ಪಾದನೆಯನ್ನು ಅಭಿವೃದ್ಧಿಗೊಳಿಸಲು ಹೊಸ ಹೊಸ ವಿಧಾನಗಳನ್ನು ಕಂಡುಹಿಡಿಯುವಲ್ಲಿ ವೈಚಾರಿಕವಾಗಿ ಯಂತ್ರಗಳನ್ನು ಮತ್ತು ವಸ್ತುಗಳನ್ನು ಬಳಸಿ ಉತ್ಪಾದನೆಯನ್ನು ಹೆಚ್ಚಿಸಬಹುದಾದ ಆಡಳಿತಗಾರರ ಎಲ್ಲ ಶ್ರಮಗಳಿಗೂ ಕಾರ್ಮಿಕರು ಬೆಂಬಲ ನೀಡುತ್ತಾರೆ.

ಆಡಳಿತಗಾರರಿಗೆ ಮತ್ತು ಕಾರ್ಮಿಕರಿಗೆ, ವಿಶ್ರಾಂತಿಧಾಮಗಳನ್ನು, ಕ್ರೀಡಾ ಮತ್ತು ಸಾಂಸ್ಕೃತಿಕ ಸೌಕರ್ಯಗಳನ್ನು, ವಸತಿಗಳನ್ನು ನಿರ್ಮಿಸುವಲ್ಲಿ ಒಟ್ಟಾರೆ ಮಾಡಲಾದ ಒಪ್ಪಂದವನ್ನು ಜಾರಿಗೊಳಿಸುವಲ್ಲಿ ಸಂಘದ ಸಮಿತಿಯು ಆಡಳಿತದ ಮೇಲೆ ಸೂಕ್ತ ಕ್ರಮ ಕೈಗೊಳ್ಳುತ್ತದೆ. ಎಲ್ಲರಿಗೂ ಸಮಾನವಾದ ಹಕ್ಕುಗಳು ಮತ್ತು ಕರ್ತವ್ಯಗಳು ಇರುತ್ತವೆ. ಎಲ್ಲರೂ ಅವರವರ ಕೆಲಸದ ಬಗ್ಗೆ ಸಂಘದ ಸಮಿತಿಗೆ ಬದ್ಧರು. ಸಭೆಗಳಲ್ಲಿ ಯಾರಾದರೂ ಉಪಯುಕ್ತ ಸಲಹೆಯನ್ನು ನೀಡಿದರೆ ಅದು ಸಮಿತಿಗೆ ಒಪ್ಪಿಗೆಯಾದರೆ ಆಡಳಿತಗಾರರು ಅದನ್ನು ಕಾರ್ಯರೂಪದಲ್ಲಿ ಜಾರಿಗೊಳಿಸಬೇಕು ಯಾರಾದರೂ ಆಡಳಿತಗಾರರನ್ನು ಟೀಕಿಸಿದರೆ ಅವರು ಅದನ್ನು ಕೇಳಿ ಗಮನಿಸಿ ಆ ಟೀಕೆಗೆ ಉತ್ತರ ಕೊಡಬೇಕು. ಹೀಗೆ ಸಭೆಗಳನ್ನು ನಡೆಸುವುದು ಅಭಿಪ್ರಾಯಗಳ ವಿನಿಮಯಕ್ಕಾಗಿ. ಕೆಲಸದ ಬಗ್ಗೆ, ನಿತ್ಯ ಜೀವನದ ಬಗ್ಗೆ ಇತ್ಯಾದಿ ವಿಷಯಗಳ ಬಗ್ಗೆ ಕೈಗೊಂಡ ತೀರ್ಮಾನಗಳು ಆಡಳಿತಗಾರರಿಗೂ ಮತ್ತು ಸಾಮಾನ್ಯ ಕೆಲಸಗಾರರಿಗೂ ಅನ್ವಯವಾಗುತ್ತವೆ.

ಸಮಾಜವಾದಿ ಸಮಾಜ ಮತ್ತು ಕಾರ್ಮಿಕ ಸಂಘಗಳು, ದುಡಿಯುವ ಜನತೆಯಲ್ಲಿ ಜೀವನದ ಎಲ್ಲ ಮುಖಗಳಲ್ಲೂ ಚುರುಕುತನ ಸದಾ ಸಂಪತ್‌ಭರಿತವಾಗಿರುತ್ತದೆ ಮತ್ತು ಅದು ಅಭಿವೃದ್ಧಿ ಹೊಂದುತ್ತಾ ಇರುತ್ತದೆ. ಹಿಂದಿನಂತೆಯೇ ಈ ಧೋರಣೆಯನ್ನು ಈಗಲೂ ಕಮ್ಯೂನಿಸ್ಟ್ ಪಾರ್ಟಿಯು ಸಮಾಜವಾದಿ ಸಮಾಜದಲ್ಲಿ ದಿಕ್‌ಸೂಚಿಯನ್ನಾಗಿ ಇರಿಸಿಕೊಂಡಿದೆ.

ಉತ್ಪಾದನೆಯನ್ನು ಯೋಜಿಸುವುದರಲ್ಲಿ ಸಮಾಜದ ಅಭಿವೃದ್ಧಿಯಲ್ಲಿ ಸಾಮೂಹಿಕವಾಗಿ ಕೆಲಸ ಮಾಡುವ ಹಕ್ಕನ್ನು ಸೋವಿಯತ್ ರಶ್ಯದ ಘಟನೆಯಲ್ಲಿ ಕೊಡಲಾಗಿದೆ. ಇದು ಸಮಾಜದ ಸಂಪತ್ತನ್ನು ವೃದ್ಧಿಸುವುದಕ್ಕೆ ಸಮಾಜದ ಪ್ರತಿಯೊಬ್ಬ ಪ್ರಜೆಯ ಕ್ಷೇಮವನ್ನು ಹೆಚ್ಚಿಸುವುದಕ್ಕೆ ಸಾಮೂಹಿಕ ಕೆಲಸವು ಎಷ್ಟು ಪರಿಪಕ್ವಯುತವಾದದ್ದು ಎಂಬುವನ್ನು ತೋರಿಸುವುದಕ್ಕೆ ರುಜುವಾತು.

1981ರಲ್ಲಿ ಸೇರಿದ್ದ ಕಮ್ಯೂನಿಸ್ಟ್ ಪಾರ್ಟಿಯ 26ನೇ ಅಧಿವೇಶನದಲ್ಲಿ ಸೋವಿಯತ್ ಸಮಾಜದಲ್ಲಿ 1980ರ ದಶಕದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯ ಗುರಿಯನ್ನು ಸಾಧಿಸುವುದಕ್ಕೆ ರೂಪರೇಖೆಗಳನ್ನು ಚರ್ಚಿಸಿ ಕೈಗೊಳ್ಳಬೇಕಾದ ಮಾರ್ಗಗಳನ್ನು ಅಂಗೀಕರಿಸಲಾಗಿತ್ತು.

1986ರಲ್ಲಿ ಸೇರಿದ್ದ ಕಮ್ಯೂನಿಸ್ಟ್ ಪಾರ್ಟಿಯ 27ನೇ ಅಧಿವೇಶನದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಸಾಕಷ್ಟು ಪರಿಣಾಮಕಾರಿಯಾಗಿ ಹೆಚ್ಚಿಸುವುದರಿಂದ ಸಮಾಜದಲ್ಲಿ ಒಂದು ಹೊಸ ಗುಣಮಟ್ಟವನ್ನು ಸಾಧಿಸಬಹುದು, ಪ್ರತಿಯೊಂದು ಸಂಸಾರಕ್ಕೂ ಪ್ರತಿಯೊಬ್ಬ ಪ್ರಜೆಗೂ ಹೆಚ್ಚು ಸೌಲಭ್ಯಗಳನ್ನು ಒದಗಿಸಿ ಕೊಡುತ್ತದೆ, ಇದು ನಮ್ಮ ಸಮಾಜವಾದಿ ದೇಶವನ್ನು ಮತ್ತಷ್ಟು ಹುಲುಸಾಗಿ ಬೆಳೆಸುತ್ತದೆ. ಅಂತಿಮವಾಗಿ ಸಮತಾವಾದದ ಜಯಭೇರಿ ಮೊಳಗುತ್ತದೆ ಎಂದು ಹೇಳಲಾಗಿದೆ.

198ಚ ಮಾರ್ಚಿ ತಿಂಗಳಲ್ಲಿ ಸೋವಿಯತ್ ರಶ್ಯದ ಕಾರ್ಮಿಕ ಸಂಘಗಳ 17ನೇ ಅಧಿವೇಶನ ಸೇರಿತ್ತು. ಈ ಅಧಿವೇಶನಕ್ಕೆ ಸೋವಿಯತ್ ರಶ್ಯದ ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಯು ಒಂದು ಸಂದೇಶವನ್ನು ಕಳುಹಿಸಿ ಕೊಟ್ಟಿತ್ತು. ಈ ಸಂದೇಶದಲ್ಲಿ ಹೇಳಿರುವುದು ಏನೆಂದರೆ : "ಕಾರ್ಮಿಕ ಸಂಘಗಳ ನಾನಾಮುಖದ ಫಲದಾಯಕವಾದ ಕೆಲಸಗಳಿಗೆ ಪಾರ್ಟಿಯು ಹೆಚ್ಚು ಮೌಲ್ಯವನ್ನು ಕೊಡುತ್ತದೆ ಅದು ಕಾರ್ಮಿಕ ಸಂಘಗಳು ಸಮಾಜವಾದಿ ಸಮಾಜದಲ್ಲಿ ಪ್ರಭಾವಶಾಲಿಯಾದ ಶಕ್ತಿ ಎಂದು ಪರಿಗಣಿಸುತ್ತದೆ, ಜನತೆಯಲ್ಲಿ ನಂಬಿಕಸ್ತ ಸ್ನೇಹವನ್ನು ಗಳಿಸಿಕೊಂಡಿವೆ ಪ್ರಜಾಪ್ರಭುತ್ವದ ಬೆಳವಣಿಗೆಗೆ ಪ್ರಭಾವಯುತ ಶಕ್ತಿಶಾಲಿ ಸಾಧನವಾಗಿವೆ ಪ್ರಭುತ್ವದ ಆಳ್ವಿಕೆಯಲ್ಲಿ ಮತ್ತು ಸಾರ್ವಜನಿಕ ಜೀವನದಲ್ಲಿ ದುಡಿಯುವ ಜನತೆಯನ್ನು ಸೆಳೆದುಕೊಳ್ಳುತ್ತವೆ. ಮತ್ತು ಅಭಿವೃದಿ ಹೊಂದಿದ ಸಮಾಜವಾದಿ ಸಮಾಜದಲ್ಲಿ ಕಾರ್ಮಿಕ ಸಂಘಗಳ ಪಾತ್ರವನ್ನು ಮತ್ತು ಪ್ರಾಮುಖ್ಯತೆಯನ್ನು ಹೆಚ್ಚಿಸುವ ಆಘೋಷಿತ ಧೋರಣೆಯನ್ನು ಪಾಲಿಸುತ್ತದೆ"

ಸೋವಿಯತ್ ರಶ್ಯದಲ್ಲಿ ಕಾರ್ಮಿಕ ಸಂಘಗಳು ಗಳಿಸಿರುವ ಉನ್ನತ ಸ್ಥಾನದ ಮೆಚ್ಚುಗೆಯ ಮಾತುಗಳಾಗಿವೆ. ಕೆಲವರು ಪಾಶ್ಚಿಮಾತ್ಯ ಸಿದ್ಧಾಂತಿಗಳು ಇವುಗಳನ್ನು ಕಾಣುವುದೂ ಇಲ್ಲ ಕಂಡುಕೊಳ್ಳಲೂ ಇಷ್ಟಪಡುವುದಿಲ್ಲ. ನಮ್ಮ ವರ್ಗ ವಿರೋಧಿಗಳು ತಮ್ಮದೇ ಆದ ವಿರೋಧಾಭಿಪ್ರಾಯವನ್ನು ಹೊಂದಿದ್ದಾರೆ. ಅದೇನೆಂದರೆ ತಮ್ಮ ರಾಷ್ಟ್ರದ ಜನತೆಗೆ ಸೋವಿಯತ್ ಜನತೆಯ ಮತ್ತು ಅಭಿವೃದ್ಧಿಯ ನಿಜಾಂಶವನ್ನು ಮತ್ತು ಕಮ್ಯೂನಿಸ್ಟ್ ಪಾರ್ಟಿ ಮತ್ತು ಕಾರ್ಮಿಕ ಸಂಘಗಳು ಸಾಧಿಸುತ್ತಿರುವ ಕೆಲಸಗಳ ಚಿತ್ರವನ್ನು ಮರೆಮಾಚುವುದು ಮತ್ತು ವಿಕೃತಗೊಳಿಸಿ ಆ ರಾಷ್ಟ್ರದ ಜನತೆಯ ಮುಂದುವರಿಸುವುದು.

○

ಛಿದ್ರಕಾರಿ ಶಕ್ತಿಗಳನ್ನು ಹೊಡೆದಟ್ಟಬೇಕಾದರೆ

ರಾಜ್ಯದಲ್ಲಿ ರೈತ ಚಳುವಳಿ ಹೊರಹೊಮ್ಮಬೇಕು

ನಿರಂತರವಾಗಿ ಗುತ್ತೇದಾರಿ ಶ್ರೀಮಂತರ ದೇವತೆಯಾದ ದಿವಂಗತ ಶ್ರೀಮತಿ ಇಂದಿರಾ ಗಾಂಧಿ 1980 ರಲ್ಲಿ ಮರಳಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಾಗ ದೇಶದ ದುಡಿಯುವ ಜನ ಬೆಲೆಯೇರಿಕೆಯಿಂದ ಬಳಲುತ್ತಿದ್ದರೆ, ರೈತಾಪಿ ಜನತೆ ಬೆಳೆದ ಮಾಲಿಗೆ ಬೆಲೆಯಿಲ್ಲದೆ ಬಳಲುತ್ತಿದ್ದರು. ರಾಷ್ಟ್ರವ್ಯಾಪಿಯಾಗಿ ಸಂಘಟಿತ ಹೋರಾಟಗಳು ಒಂದೆಡೆ ಬೆಳೆದು ಬರುತ್ತಿದ್ದವು ಅಸಂಘಟಿತ ರೈತರು ಹೋರಾಟಗಳನ್ನು ವೀಕ್ಷಿಸುತ್ತಿದ್ದರು, ಹೊಸದಾರಿಗಾಗಿ ಕಾಯುತ್ತಿದ್ದರು.

ಕರ್ನಾಟಕದಲ್ಲಿ ಕಾಂಗ್ರೈ ನಾಯಕತ್ವದಲ್ಲಿ ಗುಂಡೂರಾಯರು ಮುಖ್ಯಮಂತ್ರಿಯಾಗಿದ್ದರು ಜನರ ಹೋರಾಟಗಳನ್ನು ಪೋಲಿಸರನ್ನು ಬಳಸಿ ಕಪ್ಪುಶಾಸನಗಳ ಮುಖಾಂತರ ಧಮನಿಸಲಾಗುತ್ತಿತ್ತು ತಮ್ಮ ಸರಕಾರ ಬಂಡೆಯಂತಿದ್ದು ಯಾರೂ ಅದನ್ನು ಒಡೆಯಲಾರರೆಂದು ಅಹಂಕಾರದಿಂದ ಸರ್ವಾಧಿಕಾರಿ ಕಾಂಗ್ರೈ ನಾಯಕ ಗುಂಡೂರಾಯರು ಮೆರೆಯುತ್ತಿದ್ದರು. ನರಗುಂದ ನವಲಗುಂದದ ರೈತ-ಕೃಷಿ ಕೂಲಿಕಾರರು ಮಲಪ್ರಭಾ ಸಮನ್ವಯ ಸಮಿತಿಯ ನೇತೃತ್ವದಲ್ಲಿ ಚಳುವಳಿಯನ್ನು ಹುಟ್ಟು ಹಾಕಿದರು. ಕಾಂಗ್ರೈ ಸರಕಾರ ಅದನ್ನು ದಮನಿಸಲು ಮುಂದಾದಾಗ ಮಲಪ್ರಭಾದ ರೈತರು ಜುಲೈ 1980 ರಂದು ಬಂದ್ ಆಚರಣೆ ಮಾಡುವ ಮುಖಾಂತರ ರಾಜ್ಯದ ರೈತರ ಅತೃಪ್ತಿಯ ಪ್ರತೀಕವಾದರು. ಆ ಹೋರಾಟವನ್ನು ಹುಟ್ಟಡಗಿಸಲು ಸರಕಾರ ಮುಂದಾದಾಗ ಹತ್ತಾರು ನಗರಗಳಲ್ಲಿ ಕಾರ್ಮಿಕರು, ಪ್ರಜಾಪ್ರಭುತ್ವದ ಶಕ್ತಿಗಳು ಬೆಂಬಲಿಸಿ ಪ್ರತಿಭಟನೆ ಮಾಡುತ್ತಿರುವಂತೆಯೇ ರಾಜ್ಯದ ಬೃಹತ್ ಸಂಖ್ಯೆಯ ರೈತಾಪಿ ಜನತೆ ಸಾಮೂಹಿಕವಾಗಿ ಪ್ರತಿಭಟಿಸಿ ಬೆಂಬಲಕ್ಕೆ ಮುಂದೆ ಬಂದಾಗ ಬಂಡೆಯಂತಹ ಗುಂಡೂರಾಯರ ಕಾಂಗ್ರೈ ಸರಕಾರ ಮೊದಲಬಾರಿಗೆ ತತ್ತರಿಸಿ ಹೋಯಿತು. 80ಕೋಟಿ ರೂ. ಸವಲತ್ತುಗಳನ್ನು ರೈತರಿಗೆ ಒದಗಿಸಲು ಮುಂದಾಗುವಂತಾಯಿತು.

ಇದರ ಹಿನ್ನೆಲೆಯಲ್ಲಿ ರಾಷ್ಟ್ರವ್ಯಾಪಿಯಾಗಿ ರೈತರು ಹೋರಾಟದ ಹಾದಿಯನ್ನು ಹಿಡಿದು, ಎಲ್ಲಾ ರೈತ ಸಂಘಟನೆಗಳು ಸೇರಿದಂತೆ ಪಾರ್ಲಿಮೆಂಟಿನ ಮುಂದೆ ಹತ್ತು ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರದರ್ಶನ ನಡೆಸಿ ಕಾಂಗ್ರೈ ಕೇಂದ್ರ ಸರಕಾರವನ್ನು ನಡುಗಿಸಿ ಚರಿತ್ರೆಯನ್ನೇ ದಾಖಲು ಮಾಡಿದರು.

ರಾಜ್ಯದಲ್ಲಿ ರೈತರ ಈ ಮನೋಭಾವನೆಯನ್ನು ಸರಿಯಾದ ಧೋರಣೆಯಲ್ಲಿ ಕ್ರೋಢೀಕರಿಸಲು ಕರ್ನಾಟಕ ಪ್ರಾಂತ ರೈತ ಸಂಘಕ್ಕೆ ಸಾಧ್ಯವಾಗಲಿಲ್ಲ. ಆದರೆ ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದ ರೈತ ಸಂಘಟನೆಗಳನ್ನು ಕರೆಕೊಟ್ಟು ಐಕ್ಯ ಹೋರಾಟ ನಡೆಸಲು ಆಶಿಸಿತು. ಆದರೆ ರೈತರನ್ನು ಸರಿಯಾದ ದಿಕ್ಕಿನಲ್ಲಿ ಕರೆದೊಯ್ಯಲು ಇಚ್ಛೆಯಿರದೆ ಬಂಡವಾಳಶಾಹಿ ಪರ ರೈತ ಸಂಘಟನೆಗಳು ಜಮೀನ್ದಾರರ ನೇತೃತ್ವದಲ್ಲಿ ಹೋರಾಟಕ್ಕೆ ಮುಂದಾದವು. ಇದರಿಂದಾಗಿ ರಾಜ್ಯದ ಕಬ್ಬು ಬೆಳೆಗಾರರ ಹೋರಾಟ, ಹಾಲು ಉತ್ಪಾದಕರ ಹೋರಾಟಗಳು, ತಂಬಾಕು ಬೆಳೆಗಾರರ ಹೋರಾಟಗಳು ಬೆಳೆದು ಬಂದವು. ಅವುಗಳನ್ನು ಬಂಡವಾಳಶಾಹಿ ಭೂಮಾಲೀಕ ನೀತಿಯ ವಿರುದ್ಧ ತಿರುಗಿಸದಂತೆ ತಡೆಯಲು ಸಾಧ್ಯವಾಯಿತು.

ಆಗ ಎಡಶಕ್ತಿಗಳು ಮುಂದೆ ಬಂದು ರಾಜ್ಯದ ರೈತರ ಹೋರಾಟವನ್ನು ಪ್ರಜಾಸತ್ತಾತ್ಮಕ ದಿಕ್ಕಿನಲ್ಲಿ ಕೊಂಡೊಯ್ಯಲು ಮುಂದಾದವು. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ, ಭಾರತ ಕಮ್ಯೂನಿಸ್ಟ್ ಪಕ್ಷ, ಕಾಂಗ್ರೆಸ್ (ಎಸ್) ಲೋಕದಳ ಪಕ್ಷಗಳು ಸೇರಿ ಜನತಂತ್ರ ರಂಗವನ್ನು ರಚಿಸಲಾಯಿತು. ಅದರ ನೇತೃತ್ವದಲ್ಲಿ ನರಗುಂದದಿಂದ ಬೆಂಗಳೂರಿಗೆ ಕಾಲುನಡಿಗೆಯಲ್ಲಿ ರೈತರ ಜಾತಾ ನಡೆಸಲು ಕರೆಕೊಡಲಾಯಿತು. ಆಗ ಬಂಡವಾಳಶಾಹಿ ರೈತಸಂಘಟನೆಗಳು ರೈತರಿಗೆ ರಾಜಕೀಯ ಬೇಡವೆಂಬ ಘೋಷಣೆಯೊಂದಿಗೆ ಜಾತಾವನ್ನು ವಿರೋಧಿಸಿದವು. ಇನ್ನೊಂದೆಡೆ ಇಂದು ರೈತರ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಿರುವ ಜನತಾ ಪಕ್ಷ ಜಾತಾವನ್ನು ವಿರೋಧಿಸಿತು. ಆದರೆ ಜಾತಾ ನಿಲ್ಲಲಿಲ್ಲ. ರೈತರು ಹನಿಹನಿಯಾಗಿ, ಹಳ್ಳಗಳೋಪಾದಿಯಲ್ಲಿ ನದಿಯ ರೂಪ ತಾಳಿ ಸಾಗರಕ್ಕೆ ಸೇರಿದಂತೆ ವಿಧಾನಸೌಧದತ್ತ ಮುನ್ನಡೆದರು ಪ್ರಜಾಸತ್ತಾತ್ಮಕ ಕ್ರಾಂತಿಯ ನಾಯಕನಾದ ಕಾರ್ಮಿಕ ವರ್ಗ ಹರ್ಷದಿಂದ ಮುಂದೆ ಬಂದು ಹುಬ್ಬಳ್ಳಿ, ಚಿತ್ರದುರ್ಗ, ದಾವಣಗೆರೆ, ತುಮಕೂರು, ಬೆಂಗಳೂರು ನಗರಗಳಲ್ಲಿ ತಳಿರು ತೋರಣ ಕಟ್ಟಿ, ಹೂವಿನ ಹಾಸಿಗೆಯನ್ನೇ ಹಾಕಿ ಕಾರ್ಮಿಕ ವರ್ಗ ರೈತರನ್ನು ಸ್ವಾಗತಿಸಿತು. ಬೆಂಗಳೂರು ನಗರ ಮಣ್ಣಿನ ಮಕ್ಕಳ - ಕಾರ್ಮಿಕರ ಸಮಾಗಮ ಕಂಡು ಪುಲಕಿತವಾಯಿತು.

ಈ ಚಾರಿತ್ರಿಕ ಜಾತಾದಲ್ಲಿ ಇಡೀ ಕರ್ನಾಟಕ ಮಣ್ಣಿನ ಮಕ್ಕಳು, ಕಾರ್ಮಿಕರು, ದುಡಿಯುವ ಜನರು, ಪ್ರಜಾಸತ್ತಾತ್ಮಕ ಶಕ್ತಿಗಳು ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಪಾಲುಗೊಂಡು ಕರ್ನಾಟಕದ ರಾಜಕೀಯ ಚಳುವಳಿಗೆ ತಿರುವುಕೊಟ್ಟರು.

ಚಂದ್ರಶೇಖರಬಾಳೆ

ಜನತೆ ಆಳುವ ಸರಕಾರವನ್ನು ಅರಿತರು. ಪಾಠಕಲಿಸಲು ತೀರ್ಮಾನಿಸಿದರು. ವಿಧಾನಸಭಾ ಚುನಾವಣೆಗಳು ಬಂದವು, ಕಾಂಗ್ರೈ ಬಿಟ್ಟರೆ ಪರ್ಯಾಯ ಪಕ್ಷ ರಾಜ್ಯದಲ್ಲಿರಲಿಲ್ಲ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ, ಭಾರತ ಕಮ್ಯೂನಿಸ್ಟ್ ಪಕ್ಷ, ದಿವಂಗತ ದೇವರಾಜ ಅರಸರ ನಂತರ ರಚಿತವಾದ ಕ್ರಾಂತಿರಂಗ, ರೈತರ ಜಾತಾಕ್ಕೆ ವಿರೋಧಿಸಿದ ಜನತಾ ಪಕ್ಷಗಳು ಸೇರಿ ಚುನಾವಣಾ ರಂಗವನ್ನು ರಚಿಸಿ ರಾಜ್ಯ ವ್ಯಾಪಿಯಾಗಿ ಜಂಟೀ ಕರೆಯನ್ನು ಕೊಟ್ಟರು. ಆಗ ಕರ್ನಾಟಕ ಪ್ರಾಂತರೈತ ಸಂಘ 72 ಕ್ಷೇತ್ರಗಳಲ್ಲಿ ಪ್ರಚಾರ ನಡೆಸಿತು. ಕಾಂಗ್ರೆಸಿಗೆ ಪಾಠ ಕಲಿಸಿತು. ಹೋರಾಟದಿಂದಲೇ ಬಂದ ರಾಜಕೀಯ ರಂಗಕ್ಕೆ ಮತ ಚಲಾಯಿಸಿದರು. ಜನತಾ ಪಕ್ಷ ಅಧಿಕಾರಕ್ಕೆ ಬಂದಿತು.

(6ನೇ ಪುಟ ನೋಡಿ)

ತ್ರಿಪುರ: ಇನ್ನೊಂದು ಭಯಾನಕ ಹತ್ಯಾಕಾಂಡ

ಕಮಲ್‌ಪುರ ಸಬ್-ಡಿವಿಜನ್‌ನ ಹಳ್ಳಿಯೊಂದರಲ್ಲಿ TNV ಪ್ರತ್ಯೇಕತಾವಾದಿಗಳು ಸಂಜೆಯ ಹೊತ್ತಿಗೆ ದಾಳಿ ನಡೆಸಿ ಗೋಳಿಬಾರು ಮಾಡಿ 14 ಜನರನ್ನು ಕೊಂದಿದ್ದಾರೆ ಈ ಹಳ್ಳಿ ಅಗರ್ತಲಾದಿಂದ ಈಶಾನ್ಯಕ್ಕೆ ನೂರು ಕಿ. ಮಿ. ಗಿಂತಲೂ ಹೆಚ್ಚಾಗಿ ದೂರದಲ್ಲಿದ್ದು ಬಾಂಗ್ಲಾ ದೇಶದ ಗಡಿಯ ಬಳಿ ಇದೆ. ಗಡಿಯ ಆಚೆಯಿಂದ ಧಿಡೀರನೆ ಬಂದು ಭಯೋತ್ಪಾದಕರು ಗೋಳಿಬಾರು ನಡೆಸಿ, ಬಯೋನೇಟ್ ಮತ್ತು ಚೂರಿಗಳಿಂದ ತಿವಿದು, ಕೂಡಲೇ ಪರಾರಿಯಾದರು.

ಈ ಆಕ್ರಮಣ ಆಗಸ್ಟ 29ರಂದು ರಾತ್ರಿ ಸುಮಾರು 7-30ಕ್ಕೆ ನಡೆಯಿತು. ಈ ಹತ್ಯಾಕಾಂಡದಲ್ಲಿ ಮೃತಪಟ್ಟವರಲ್ಲಿ ದಿನಸಿ ಅಂಗಡಿಯಲ್ಲಿದ್ದ ಮೂವರು ಯುವಕರು, ಆದಿವಾಸಿ ಶಿಕ್ಷಕ, ಮತ್ತು ನಾಲ್ಕು ಜನ ಆದಿವಾಸಿ ಕುಟುಂಬಗಳ ಹೆಂಗಸರು ಮಕ್ಕಳು ಸೇರಿದ್ದರು. ಹೆಚ್ಚಿನ ಗಂಡಸರು ಮಾರ್ಕೆಟಿಗೆ ಹೋಗಿರುವ ಹೊತ್ತನ್ನು ಈ ದಾಳಿಗೆ ಆರಿಸಿಕೊಳ್ಳಲಾಗಿತ್ತು. ಆಮೇಲೆ ತಿಳಿದು ಬಂದಂತೆ TNV ಸ್ವಯಂ ಸೇವಕರು ಆ ಪ್ರದೇಶದಲ್ಲಿ ಅಡಗಿಕೊಂಡಿದ್ದು BSF ಈ ಬಗ್ಗೆ ಯಥಾ ಪ್ರಕಾರ ನಿಷ್ಕ್ರಿಯವಾಗಿತ್ತು.

ಈ ವರ್ಷದ ಆರಂಭದಿಂದ 38 ಕೊಲೆಗಳು ನಡೆದಿದ್ದರೂ ಇದು ಈ ವರೆಗೆ ನಡೆದ ಭಯಾನಕ ಹತ್ಯಾಕಾಂಡಗಳಲ್ಲೊಂದು ಈ ಹತ್ಯಾಕಾಂಡ ಗ್ರಾಮಸ್ಥರಲ್ಲಿ ಭಯ ಹುಟ್ಟಿಸುವುದು, ರಾಜ್ಯದ ಆಡಳಿತವನ್ನು ದಿಕ್ಕೆಡಿಸುವುದು, ಮತ್ತು ಬಂಗಾಲಿ ಆದಿವಾಸಿಗಳ ನಡುವೆ ಕೋಮು ಗಲಭೆ ಪ್ರಚೋದಿಸುವ TNV ನೀತಿಯ ಭಾಗ.

ಈ ಹತ್ಯಾಕಾಂಡದ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸಲು ಎಡರಂಗ ಆಗಸ್ಟ್ 31ರಂದು ತ್ರಿಪುರಾ ಬಂದ್‌ಗೆ ಕರೆ ನೀಡಿತು. ಬಂದ್ ಶಾಂತಿಯುತ, ಗಂಭೀರ ರೀತಿಯಲ್ಲಿ ನಡೆದು ಪ್ರತ್ಯೇಕತಾವಾದಿಗಳನ್ನು ಕೊನೆಯವರೆಗೆ ಎದುರಿಸಿ ಸೋಲಿಸುವ ತ್ರಿಪುರಾದ ಜನತೆಯ ದೃಢ ನಿರ್ಧಾರವನ್ನು ಬಲಪಡಿಸಿದೆ.

ಈ ಭೀಕರ ಹತ್ಯಾಕಾಂಡ TNV ಇನ್ನಷ್ಟು ಏಕಾಕಿಯಾಗುತ್ತಿರುವ ಮತ್ತು ಅದರಿಂದಾಗಿ ಹುಚ್ಚಾಪಟ್ಟೆ ವರ್ತಿಸುತ್ತಿರುವುದರ ಫಲ. ಎಡರಂಗ ಸರ್ಕಾರದ ಮತ್ತು ಪಕ್ಷದ ವಿವಿಧ ಕಾರ್ಯಕ್ರಮಗಳು TNVಯನ್ನು ರಾಜಕೀಯವಾಗಿ ಏಕಾಕಿಯಾಗಿಸುವಲ್ಲಿ ಸಫಲವಾಗಿದೆ. ಲಾಲ್‌ಡೆಂಗಾನ MNF ಸಶಸ್ತ್ರ ಹೋರಾಟದ ಅಂತ್ಯ, MNF ನ ಶರಣಾಗತಿಯಿಂದ ಸಹ TNV ಯ ಸೊಂಟ ಮುರಿದಂತಾಗಿದೆ. ಶಸಾಸ್ತ್ರ ಸರಬರಾಜು ಹಾಗೂ ರಾಜಕೀಯವಾಗಿ ಇದರಿಂದ TNVಗೆ ಪ್ರತಿಕೂಲ ಪರಿಸ್ಥಿತಿ ಒದಗಿದೆ. ಇದರಿಂದ TNV ಇನ್ನಷ್ಟು ಹೆಚ್ಚು ಹತಾಶರಾಗಿ ಇಂತಹ ಹತ್ಯಾಕಾಂಡಗಳ ಪುನರಾವರ್ತನೆಯಾಗುವ ಸಂಭವವಿದೆ. ಇದನ್ನು ಪಕ್ಷ ರಾಜಕೀಯವಾಗಿ ಎದುರಿಸಲು ನಿರ್ಧರಿಸಿದೆ.

○

ಪ. ಬಂಗಾಳ: ವಿಶ್ವಶಾಂತಿ ದಿನಾಚರಣೆ

ಸೆಪ್ಟೆಂಬರ್ 1 ರಂದು ರಾಜ್ಯದಲ್ಲಿ ಈ ಬಾರಿ ಅಭೂತಪೂರ್ವ ಪ್ರಮಾಣದಲ್ಲಿ ಯುದ್ಧವಿರೋಧಿ ದಿನಾಚರಣೆ ಆಚರಿಸಲಾಯಿತು. ಕಲ್ಕತ್ತಾದ ಬ್ರಿಗೇಡ್ ಪೆರೇಡ್ ಗ್ರೌಂಡ್‌ನಲ್ಲಿ ಎಲ್ಲಾ ಎಡ ಟ್ರೇಡ್‌ಯೂನಿಯನ್‌ಗಳು ಸೇರಿ ಭಾರಿ ಬಹಿರಂಗ ಸಭೆ ಏರ್ಪಡಿಸಿದ್ದವು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾ॥ ಸರೋಜ್ ಮುಖರ್ಜಿ ವಿಶ್ವವನ್ನು ವಿನಾಶಕಾರಿ ಯುದ್ಧದತ್ತ ಒಯ್ಯುತ್ತಿರುವ ಅಮೇರಿಕನ್ ಸಾಮ್ರಾಜ್ಯಶಾಹಿಯ ನೀತಿಗೂ ನಿಕರಾಗುವ, ದ. ಆಫ್ರಿಕಾ ಮತ್ತು ನಮೀಬಿಯಾದಲ್ಲಿ ಅದರ ಬರ್ಬರತೆಗೂ, ಗೋರ್ಖಾಲ್ಯಾಂಡ್ ಚಳುವಳಿಗಳಿಗೆ ಬೆಂಬಲ ನೀಡಿ ಭಾರತವನ್ನು ಒಡೆಯುವ ಪ್ರಯತ್ನದ ಸಂಬಂಧವನ್ನು ವಿವರಿಸಿದರು. ಸಭೆಯಲ್ಲಿ ಎರಡು ವಾರಗಳಲ್ಲಿ ಪ. ಬಂಗಾಳದ ಜನತೆ ನಿಕರಾಗುವ ಸಹಾಯಧನಕ್ಕೆ 4 ಲಕ್ಷ ರೂ, ಮತ್ತು 6 ಟನ್‌ಗಳಷ್ಟು ಸರಂಜಾಮುಗಳನ್ನು ನೀಡಿದ್ದಾರೆ ಎಂದು ಹರ್ಷ ಧ್ವನಿಗಳ ಮಧ್ಯೆ ಘೋಷಿಸಿದರು. ಸರಂಜಾಮುಗಳನ್ನು ಹೊತ್ತ ಸೋವಿಯತ್ ಹಡಗು ನಿಕರಾಗುವಕ್ಕೆ ಈಗಾಗಲೇ ಹೊರಟಿದೆ.

ಕಾ॥ ಜ್ಯೋತಿ ಬಸು ಮಾತನಾಡುತ್ತಾ ಹಿಟ್ಲರ್‌ನನ್ನು "ಪ್ರಜಾಪ್ರಭುತ್ವ" ದೇಶಗಳು ಸಮಾಧಾನಪಡಿಸಲು ಪ್ರಯತ್ನಿಸಿದ್ದರಿಂದ ಎರಡನೇ ಮಹಾಯುದ್ಧಕ್ಕೆ ನಾಂದಿಯಾಯಿತು. ಈಗಲೂ ಅಮೆರಿಕನ್ ಯುದ್ಧಕೋರರನ್ನು ಸಮಾಧಾನ ಪಡಿಸಲು ಪ್ರಯತ್ನಿಸಿದರೆ ಅನಾಹುತ ಖಂಡಿತ ಎಂದರು. ಸಮಾಜವಾದಿ ದೇಶಗಳಲ್ಲಿ ಮಿಲಿಟರಿ ಖರ್ಚು ಸಾಮ್ರಾಜ್ಯಶಾಹಿಯನ್ನು

(6ನೇ ಪುಟ ನೋಡಿ)

ವೆಂಕಟಸ್ವಾಮಿ ಆಯೋಗದ ವರದಿ ಏನು ಹೇಳಿದೆ ?

ವೆಂಕಟ ಸ್ವಾಮಿ ಆಯೋಗ ಅಥವಾ ಹಿಂದುಳಿದ ವರ್ಗಗಳ ಎರಡನೇ ಆಯೋಗದ ವರದಿ ಕುರಿತು ಭಾವನಾತ್ಮಕವಾಗಿ ವಾದ ವಿವಾದ ನಡೆಯುತ್ತಿದೆ. ಈ ಸಂದರ್ಭದಲ್ಲಿ ವೆಂಕಟಸ್ವಾಮಿ ಆಯೋಗ ಯಾಕೆ ರಚಿಸಲ್ಪಟ್ಟಿತು? ಅದರ ಶಿಫಾರಸುಗಳು ಏನು ಎಂದು ತಿಳಿದುಕೊಳ್ಳುವುದು ಅವಶ್ಯ.

ಹಲವೆಡೆಗಳಲ್ಲಿ ವೆಂಕಟಸ್ವಾಮಿ ಅಯೋಗ ಎನು ಹೇಳಿದೆ? ಅದರ ವಿವರಗಳೇನು ? ಎಂದು ತಿಳಿದುಕೊಳ್ಳದೆ ಚಳುವಳಿ ನಡೆಯುತ್ತಿದೆ. ಜನತಾ ಸರ್ಕಾರದ ವಕ್ತಾರರು, ಬಸವಣ್ಣಪ್ಪನವರು "ಈ ವರದಿಯನ್ನು ನಮ್ಮ ಸರ್ಕಾರ ಇನ್ನೂ ಚರ್ಚಿಸಿ, ತಿರ್ನಾನ ಕೈಗೊಳ್ಳಬೇಕಷ್ಟೆ.ಆದ ಕಾರಣ ತರಾತುರಿಯಿಂದ ಅದರ ವಿರುದ್ಧ ಚಳುವಳಿ ನಡೆಸುವುದು ಸಮಂಜಸವಲ್ಲ" ಎಂದು ಹೇಳಿಕೆ ನೀಡಿದರೂ, ಚಳುವಳಿ ನೇತೃತ್ವ ಇದ್ದೂ, ನೇತೃತ್ವ ಇಲ್ಲದೆ ಒಂದು ವಾರದಿಂದಲೇ ನೆಡೆಯುತ್ತಲೇ ಬರುತ್ತಿದೆ. ಮುಖ್ಯವಾಗಿ ಅದು ಮೈಸೂರು, ಮಂಡ್ಯ, ಮತ್ತು ಹಾಸನ ಜಿಲ್ಲೆಗಳಲ್ಲಿ ವಿಶೇಷವಾಗಿ ಸೀಮಿತವಾಗಿದೆ. ಇದರಿಂದ ಅದರ ಹಿಂದೆ ಯಾವ ಪ್ರಮುಖರು ಇದ್ದಾರೆ ಎಂಬುದು ಸ್ಪಷ್ಟವಾಗುತ್ತದೆ.

ಇದೀಗ ರಾಮಕೃಷ್ಣ ಹೆಗಡೆಯವರು ಹಲವಾರು ಮುಖಂಡರನ್ನು ಹೆಸರಿಸಿ ಅವರೊಡನೆ ಈ ಅಯೋಗದ ಕುರಿತು ಅಭಿಪ್ರಾಯ ವಿನಿಮಯ ಮಾಡಲು ಸಭೆ ಕರೆದಿದ್ದಾರೆ ಇದುಸ್ವಾಗತ. ಆದರೆ ಪಕ್ಷಗಳನ್ನು ಆಮಂತ್ರಿಸುವಾಗ ಆ ಪಕ್ಷಗಳ ಪರವಾಗಿ ಯಾರು ಪ್ರತಿನಿಧಿಸಬೇಕೆಂಬುದನ್ನು ತಿರ್ಮಾನಿಸುವ ಅಧಿಕಾರ ಹೆಗಡೆಯವರಿಗೆ ಯಾರು ಕೊಟ್ಟಿದ್ದು ಎಂದು ಕೇಳಬೇಕಾಗಿದೆ.

ವೆಂಕಟಸ್ವಾಮಿ ಆಯೋಗದ ಶಿಫಾರಸುಗಳು ಏನು, ಅವು ಹಾವನೂರು ಕಮಿಷನಿಗಿಂತ ಹೇಗೆ ಭಿನ್ನವಾಗಿವೆ, ಎಂಬುದನ್ನು ತಿಳಿದುಕೊಳ್ಳುವುದು ಮುಖ್ಯ. ಆಗ ಮಾತ್ರ ವೆಂಕಟಸ್ವಾಮಿ ವರದಿಯನ್ನು ಸಂಪೂರ್ಣವಾಗಿ ಒಪ್ಪಬಹುದು ಅಥವಾ ಬಾಗಶಃ ಒಪ್ಪಬಹುದು, ಅವುಗಳಲ್ಲಿ ಯಾವ ಶಿಫಾರಸುಗಳನ್ನು ಒಪ್ಪಬಹುದು ಯಾವ ಶಿಫಾರಸುಗಳನ್ನು ಬಿಡಬೇಕು ಅಥವಾ ಪೂರ್ತಿಯಾಗಿ ವರದಿಯನ್ನು ಕೈಬಿಡಬೇಕೇ ಎಂಬುದರ ಕುರಿತು ವಿವೇಚನೆ ಮಾಡಿ ನಿಲುವು ತೆಗೆದುಕೊಳ್ಳಲು ಸಾಧ್ಯ. ಈ ವಿವರಗಳನ್ನು ಸೂಕ್ಷ್ಮವಾಗಿ ಇಲ್ಲಿ ಕೊಡಲು ಇಚ್ಛಿಸುತ್ತೇನೆ.

ಆಯೋಗ ರಚನೆಯ ಹಿನ್ನೆಲೆ

ಹಾವನೂರು ಕಮಿಷನ್ ನೇಮಕವಾದದ್ದು ಅದರ ವಿರುದ್ಧ ಸುಪ್ರಿಂ

ಪಿ. ರಾಮಚಂದ್ರರಾವ್

ಕೋರ್ಟಿನಲ್ಲಿ ಹಾವನೂರು ಕಮಿಷನ್‌ನ ವಿರುದ್ಧ ರಿಟ್ ಪಿಟಿಷನ್ ನಂಬರ್ 1297-98/79 ಮತ್ತು 1407/79 ದಾಖಲಾಗಿದ್ದು ಎಲ್ಲರಿಗೂ ಗೊತ್ತಿದೆ. ಅಲ್ಲದೆ ಕರ್ನಾಟಕ ಸರ್ಕಾರದ 4-3-77 ರ ಜಿ.ಓ.ಯನ್ನು ಪ್ರಶ್ನಿಸಿ ಎಸ್. ಎಲ್. ಪಿ. ನಂಬರ್ 9ಸಿವಿಲ್ 6656 79 ಮತ್ತು ಎಸ್. ಎಲ್. ಪಿ.ನಂಬರ್ 9854/79 ನ್ನು ದಾಖಲು ಮಾಡಲಾಗಿತ್ತು. ಈ ಸಂದರ್ಭದಲ್ಲಿ ಸುಪ್ರಿಂ ಕೋರ್ಟಿನ ನಿರ್ದೇಶನ ಕೊಟ್ಟು ಕರ್ನಾಟಕ ಸರ್ಕಾರವು ಒಪ್ಪಿಕೊಂಡ ಆಧಾರದಲ್ಲಿ ಸಂವಿಧಾನದ 15(4) ಮತ್ತು 16(4) ಮತ್ತಿತರ ಕಲಮುಗಳ ಬೆಳಕಿನಲ್ಲಿ ಮತ್ತು ಸುಪ್ರಿಂ ಕೋರ್ಟಿನ ಹಲವು ತೀರ್ಪುಗಳ ಹಿನ್ನೆಲೆಯಲ್ಲಿ ಹಿಂದುಳಿದ ವರ್ಗಗಳ ಪಟ್ಟಿಗಳನ್ನು ಪರಿಶೀಲಿಸುವ ಸಲುವಾಗಿ ಕರ್ನಾಟಕ ಸರ್ಕಾರವು ವೆಂಕಟಸ್ವಾಮಿ ಆಯೋಗವನ್ನು ವೆಂಕಟಸ್ವಾಮಿ ಅಧ್ಯಕ್ಷತೆಯಲ್ಲಿ ಹಿಂದುಳಿದ ವರ್ಗಗಳ ಎರಡನೇ ಆಯೋಗವನ್ನು ರಚಿಸಿತು.

ನಿರ್ದೇಶನಗಳು

ಆಯೋಗಕ್ಕೆ ಕೊಟ್ಟ ನಿರ್ದೇಶನಗಳು ಈ ರೀತಿ ಇವೆ:

1) 22.2.1977 ನೇ ತಾರೀಖಿನ ಜಿ. ಓ, ನಂಬರ್ ಎಸ್. ಡಬ್ಲ್ಯೂ ಎಲ್. 12 ಟಿ. ಬಿ. ಎಸ್ 72 ಹಿಂದುಳಿದ ವರ್ಗಗಳ ಪಟ್ಟಿಯನ್ನು ಸಂವಿಧಾನದ 15 (4) ಮತ್ತು 16 (4) ಕಲಮುಗಳ ಮತ್ತು ಸುಪ್ರಿಂ ಕೋರ್ಟಿನ ಹಿನ್ನೆಲೆಯಲ್ಲಿ ಪುನರ್ ವಿಮರ್ಶಿಸುವುದು.

2) ಕರ್ನಾಟಕ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಸ್ಥಿತಿಗಳನ್ನು ವೈಜ್ಞಾನಿಕವಾಗಿ ಮತ್ತು ವಾಸ್ತವಿಕವಾಗಿ ಸಂಶೋಧಿಸುವುದು. ಮತ್ತು ಅವುಗಳ ಮುನ್ನಡೆಗೆ ನಿರ್ಧಿಷ್ಟ ಕ್ರಮಗಳನ್ನು ಸೂಚಿಸುವುದು.

3) ಕರ್ನಾಟಕ ರಾಜ್ಯ ಸರಕಾರ ಹಿಂದುಳಿದ ವರ್ಗಗಳ ಸುಧಾರಣೆಗೆ ಕೈಗೊಂಡ ಕ್ರಮಗಳು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿವೆ ಎಂದು ಪರಿಶೀಲಿಸುವುದು. ನಿರ್ಧಿಷ್ಟವಾಗಿ ವಿದ್ಯಾಭ್ಯಾಸ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಅವುಗಳ ಪ್ರಾತಿನಿಧ್ಯ ಎಷ್ಟು ಎಂದು ಪರಿಶೀಲಿಸುವುದು.

4) ಸಾರ್ವಜನಿಕ ಸೇವೆಗಳಲ್ಲಿ (ನೌಕರಿಗಳಲ್ಲಿ) ಮತ್ತು ವಿದ್ಯಾಭ್ಯಾಸ ಸಂಸ್ಥೆಗಳಲ್ಲಿ ಯಾವ ಯಾವ ಹಿಂದುಳಿದ ವರ್ಗಗಳಿಗೆ ಎಷ್ಟೆಷ್ಟು ಸ್ಥಾನಗಳನ್ನು ಇಡಬೇಕೆಂದು ಸೂಚಿಸುವುದು ಇತ್ಯಾದಿ.

ಆಯೋಗದ ಕೆಲಸ ಕಾರ್ಯಗಳು

1 ಪ್ರಶ್ನಾವಳಿಯನ್ನು ತಯಾರು ಮಾಡಿ ನವಂಬರ್ 1983 ರಲ್ಲಿ ಪ್ರಕಟಿಸಿತು.

2 ಸಾರ್ವಜನಿಕರಿಂದ 30-4-84 ರ ವರಗೆ ಪ್ರಶ್ನಾವಳಿಗೆ ಜವಾಬುಗಳನ್ನೂ ಪಡೆಯಿತು.

3 ಹಾವನೂರು ಆಯೋಗದ ವರದಿ ಮತ್ತು ಶಿಫಾರಸುಗಳು, ಆ ಶಿಫಾರಸುಗಳ ಮೇಲೆ ಕರ್ನಾಟಕ ಸರ್ಕಾರದ ವಿವಿಧ ಜಿ.ಓ. ಗಳು ಸುಪ್ರಿಂಕೋರ್ಟಿನ ಸಂಬಂಧ ಪಟ್ಟ ತೀರ್ಮಾನಗಳ ಅಭ್ಯಾಸ ಮಾಡುವುದು.

4 ಜಾತೀವಾರಾಗಿ ಕರ್ನಾಟಕದಲ್ಲಿ ಪಂಚಾಯತ್‌ಗಳಲ್ಲಿಅಧ್ಯಕ್ಷ,ಉಪಾಧ್ಯಕ್ಷ ಮತ್ತು ಸದಸ್ಯರ ಸಂಖ್ಯೆಗಳನ್ನು1981 ಜನಸಂಖ್ಯೆಗನುಸಾರವಾಗಿ ಎಷ್ಟು ಎಂದು ಪರಿಶೀಲಿಸಿತು. ಲಿಂಗಾಯಿತರು ಮತ್ತು ಒಕ್ಕಲಿಗರು ಗ್ರಾಮಾಂತರಗಳಲ್ಲಿ ಉಚ್ಛಸ್ಥಾನದಲ್ಲಿ ಇದ್ದಾರೆ. ಕುರುಬ, ಮರಾಠ, ಪರಿಶಿಷ್ಟವರ್ಗ, ಈಡಿಗ, ಉಪ್ಪಾರ ಮತ್ತು ಗೊಲ್ಲರ ಜಾತಿಗಳಿಗೆ ಅವರ ಜನಸಂಖ್ಯೆ ದಶಾಂಶಕ್ಕಿಂತ ಅಧಿಕ ಸ್ಥಾನ ದೊರಕಿದೆ, ಉಳಿದವರಿಗೆ ಉದಾ: ಮುಸ್ಲಿಂ ಪರಿಶಿಷ್ಠ ಜಾತಿ, ಬೇಡ ಮತ್ತು ಬೆಸ್ತರಿಗೆ ಕಡಿಮೆ ಸ್ಥಾನಗಳು ದೊರಕಿವೆ ಎಂಬ ಅಂಶಗಳನ್ನು ಆಯೋಗವು ಕಂಡುಕೊಂಡಿತು.

5 ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಬ್ರಾಹ್ಮಣರು, ಒಕ್ಕಲಿಗರು, ಲಿಂಗಾಯಿತರು, ಕ್ರಿಶ್ಚಿಯನರು,ಸಿಖ್ಖರು,ಜೈನರು, ಬಲಿಜರು, ವೈಶ್ಯರು, ಕ್ಷತ್ರಿಯರು, ಮತ್ತು ಮುಸ್ಲಿಮರು ಅಧಿಕ ಸ್ಥಾನಗಳನ್ನು ಪಡೆದುಕೊಂಡಿದ್ದಾರೆ ಎಂದು ಕಂಡುಕೊಂಡಿತು.

6 1977-78 ರಿಂದ 1983-84 ರವರೆಗೆ 116 ಸರ್ಕಾರಿ ಇಲಾಖೆಗಳಿಗೆ ಡಿ. ಆರ್. ಸಿ.,ಕೆ. ಪಿ. ಎಸ್.ಸಿ ರಾಜ್ಯ ಮಟ್ಟದ ಮತ್ತು ಜಿಲ್ಲಾ ಮಟ್ಟದ ಸಮಿತಿಗಳ ಮೂಲಕ ಭರ್ತಿ ಮಾಡಿದ ವಿವರಗಳನ್ನು ಪಡೆದಾಯಿತು. ○

ಸದಸ್ಯರು

ಟಿ. ವೆಂಕಟ ಸ್ವಾಮಿ, ಡಾ|| ಎಸ್. ಶೀನಪ್ಪ, ಡಾ|| ಕೆ. ಎಚ್ ಚೆಲುವರಾಜ್, ಎಂ ವಿ. ಸೂರಾಚಾರಿ, ವಿದ್ಯಾದರ ಗುರೂಜಿ, ಪ್ರೊ|| ಜಾನ್ ಬಿ.ಕುತ್ತಿ ಇ. ಎಂ ಬಶೀರ್ ಉದ್ದಿನ್, ಅಮ್ಮೆಂಬಳ ಬಾಳಪ್ಪ, ಆರ್. ಎಸ್. ನಾಯಕ್, ಎ. ಎಂ. ಧರ್ಮ ಲಿಂಗಂ, ವಿ. ಡಿ. ವೀರಕಾಂತ್ ರಾಜ್, ಎಂ. ಎಲ್ ಮುತ್ತಣ್ಣನವರ್, ವಿ.ವೆಂಕಟರಮಣ,ಬಿ.ಪುಟ್ಟಯ್ಯ ಮತ್ತು ಎ. ಎಸ್. ಹೆಳವರ.

ಹಾವನೂರು ಆಯೋಗ ಹಾಗೂ ಆಗಿನ ಸರ್ಕಾರದ ತೀರ್ಮಾನಗಳು

1) 22-2.77 ರ ಜಿ.ಓ.ದಮೂಲಕ ಕರ್ನಾಟಕಸರ್ಕಾರವುಹಾವನೂರುಕಮಿಷನ್ನಿನ ಶಿಫಾರಸುಗಳನ್ನು ಒಪ್ಪಿ ಸಂವಿಧಾನದ 15(4)ಮತ್ತು 16(4) ಕಲಂಗಳಿಗೆ ಅನ್ವಯವಾಗಿ ಮೂರು ಗುಂಪುಗಳಾಗಿ ಮಿಸಲಾತಿ ಮಾಡಿತು; ಬಿ. ಸಿ. ಎಮ್. (ಹಿಂದುಳಿದ ಸಮುದಾಯ), ಬಿ. ಸಿ. ಟಿ. (ಹಿಂದುಳಿದ ಜಾತಿಗಳು) ಮತ್ತು ಬಿ.ಟಿ. (ಹಿಂದುಳಿದ ವರ್ಗ)

2) ಹಾವನೂರು ಕಮಿಷನ್ನಿನ ಶಿಫಾರಸುಗಳಲ್ಲಿ ಸೇರದಿದ್ದರೂ, ಅರಸು ಸರ್ಕಾರವು 16 (4) ಕಲಮಿನಡಿಯಲ್ಲಿ ಬಿ.ಸಿ. ಎಂ. ಗುಂಪಿನಲ್ಲಿ ಮುಸ್ಲಿಂ, ಅರಸು, ಗಾಣಿಗ, ದೇವಾಡಿಗ, ರಜಪೂತ, ಬಲಿಜ ಮತ್ತು ಸತ್ತಾನಿ ಹಾಗೂ ಎರಡು ತಲೆಮಾರುವರೆಗಿನ ಕ್ರಿಶ್ಚಿಯನ್ ಪರಿಶಿಷ್ಠ ಜಾತಿ ಮತಾಂತರಿಗಳ ಸಮುದಾಯಗಳನ್ನು ಮೀಸಲಾತಿ ಪಟ್ಟಿಗೆ ಸೇರಿಸಿತು.

3) ಅಲ್ಲದೆ 15(4) ಕಲಂನಡಿಯಲ್ಲಿ ಬಿ.ಸಿ.ಎಂ. – ಬಿ.ಸಿ.ಟಿ. ಗುಂಪುಗಳ ಪಟ್ಟಿಯಲ್ಲಿ ಮುಸ್ಲಿಂ ಮತ್ತು ಪರಿಶಿಷ್ಠ ಜಾತಿ ಮತಾಂತರಿಗಳನ್ನು ಸೇರಿಸಿತು. ಒಟ್ಟು 16 ಜಾತಿಗಳನ್ನು ಬಿ.ಸಿ.ಎಂ.ಗೆ 429 ಜಾತಿಗಳನ್ನು ಬಿ. ಸಿ. ಟಿ. ಗೆ ಮತ್ತು 62 ಜಾತಿಗಳನ್ನು ಬಿ. ಟಿ. ಗೆ ಸೇರಿಸಲಾಯಿತು. ಹಿಂದುಳಿದ ವರ್ಗಗಳಿಗೆ ಆರ್ಥಿಕ ಪರಿಮಿತಿಯನ್ನು ವಾರ್ಷಿಕ ರೂ. 8,000 ಎಂದು ನಿರ್ದರಿಸಿತು

4) ಹಾವನೂರು ಕಮಿಷನ್ ಶಿಫಾರಸುಗಳನ್ನು ಮೀರಿ ಸರ್ಕಾರವು ಜಾತಿ ಮತ್ತು ಸಮುದಾಯದ ಪ್ರಶ್ನೆ ಬಿಟ್ಟು ವಾರ್ಷಿಕ ವರಮಾನ ರೂ 4, 800 ಪರಿಮಿತಿಯಿರುವ ಎಲ್ಲಾ ಜಾತಿಗಳನ್ನು ವಿಶಿಷ್ಠ ಗುಂಪು ಎಂದು ಪರಿಗಣಿಸಿ ಮೀಸಲಾತಿ ನಿರ್ಧರಿಸಿತು.

5) ಮೀಸಲಾತಿ ಪ್ರಮಾಣ ಶೇಕಡವಾರು ಹೀಗಿತ್ತು.

ಬಿ. ಸಿ. ಎಂ ಶೇ. 20, ಬಿ. ಸಿ. ಟಿ ಶೇ. 10, ಬಿ. ಟಿ. ಶೇ. 5, ಬಿ. ಎಸ್. ಜಿ. ಶೇ. 5.

26-6-1979 ರ ಜಿ. ಓ. ಪ್ರಕಾರ ಕಲಂ 15(4) ಮತ್ತು 16(4)ನ್ನು ಕಲಂ 14, 15(1), 16(1)ರ ಜೊತೆ ಅರ್ಥೈಸಿ ವಿಶಿಷ್ಟ ಗುಂಪಿನ ಮೀಸಲಾತಿಯನ್ನು ಶೇ. 5ರಿಂದ ಶೇ. 15ಕ್ಕೆ ಸರ್ಕಾರವು ಏರಿಸಿತ್ತು.

6) 4-3-77 ರ ಜಿ. ಓ. ಪ್ರಕಾರ ರೋಷ್ಟರ್ ಪದ್ಧತಿ ಆರಂಭಿಸಲಾಯಿತು

22-8-77 ಮತ್ತು 29-9-77ರ ಜಿ. ಓ. ಮೂಲಕ ಹಿಂದುಳಿದ ವರ್ಗಗಳ ಅಭಿವೃದ್ಧಿ ಸಾಧಿಸಲು ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆಗಳನ್ನು ಸೃಷ್ಟಿಸಲಾಯಿತು. ಅಲ್ಲದೆ ಕರ್ನಾಟಕ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಅಭಿವೃದ್ಧಿ ಕಾರ್ಪೊರೇಷನ್ ಲಿಮಿಟೆಡ್‌ನ್ನು ಸ್ಥಾಪಿಸಲಾಯಿತು.

1-1-82ರ ಜಿ. ಓ. ಮೂಲಕ ಬೇಡರು, ಬಾರ್ಕಿ ಮತ್ತು ಪರಿವಾರ ನಾಯಕರು ಎಂಬ ಉಪ ಜಾತಿಗಳನ್ನು ಸೇರಿಸಲಾಯಿತು. ○

ವೆಂಕಟಸ್ವಾಮಿ ಆಯೋಗದ ಶಿಫಾರಸುಗಳು

1) ಸಂವಿಧಾನದ 15(4) ಕಲಂ ಮೇರೆಗೆ ಹಿಂದುಳಿದ ವರ್ಗಗಳಿಗೆಸಾಮಾಜಿಕ ಮತ್ತು ವಿದ್ಯಾಭ್ಯಾಸ ಆಧಾರದಲ್ಲಿ 35 ಜಾತಿ / ಸಮುದಾಯಗಳನ್ನು ಸೇರಿಸುವುದು.

2) ಹಿಂದುಳಿದ ವರ್ಗಗಳನ್ನು ಈ ರೀತಿ ವರ್ಗಗಳ ಜಾತಿ ಸಮುದಾಯಗಳ ಈ ರೀತಿ ಗುಂಪು ಮಾಡಲಾಯಿತು.

ಎ ಗುಂಪು

ಎಸ್. ಎಸ್. ಎಲ್. ಸಿ. ಯಲ್ಲಿ ರಾಜ್ಯ ವ ಸರಾಸರಿ . ಶೇಗಡೆ ಪ್ರಮಾಣಕ್ಕಿಂತಲೂ ಕಡಿಮೆಯಿರುವ ಜಾತಿಗಳು ಅಧಿಕ ಸ್ಥಾನ ಪಡೆದ ಜಾತಿಗಳೆಂದು ಪರಿಗಣಿಸಿ ರಾಜ ಭಂಡಾರಿ, ಬಂಜಾರು ಭಟ್, ಕೊಟ್ವಾರಿ, ದೇವಾಡಿಗ, ಸಿಕ್ಕಲಿಗರು (ಹಿಂದೂ) ನಾಯಿಂದ, ಜೋಗಿ, ಗೊಂಧಾಳಿ, ಈಡಿಗ, ಮುಸ್ಲಿಂ, ಹೂಗಾರ, ಕುಂಬಾರ, ಅಗಸ, ಬಾವಾಜಿ, ಗೊಲ್ಲರು. (15 ಜಾತಿ)

ಬಿ ಗುಂಪು

ಇತರ ಎಲ್ಲಾ ಹಿಂದುಳಿದ ಜಾತಿಗಳನ್ನು ಎ ಗುಂಪಿಗಿಂತಲೂ ಹಿಂದುಳಿದ ಜಾತಿಗಳನ್ನು ಮೇದಾರ್, ಕಾತಿಕ, ಕುರುಬ, ಬೆಸ್ತ, ಹಾಲುವಕ್ಕಿ ಒಕ್ಕಲು, ಉಪ್ಪಾರ, ಬೇಡ, ತಿಗಳ, ಹೆಳವ, ರಾಯರವಾತ, ಕುಡುಬಿ, ದಾಸರ ಆ, ಲಾಡರು, ಬುಡಬುಡಕಿ, ತೇವಾರ್, ಗಾಣಿಗ, ಶಿದ್ಧಿ, ಅಂಬೆಲ್ ಕರನ್ ಖಾನೂನಿ (19 ಜಾತಿ) ಕ್ರಿಶ್ಚಿಯನ್ ಪರಿಶಿಷ್ಟಜಾತಿ ಮತಾಂತರಿಗಳನ್ನು ಬಿ. ಗುಂಪಿಗೆ ಸೇರಿಸಲಾಯಿತು.

3. ಎಷ್ಟು ಮಿಸಲಾತಿ ಪ್ರಮಾಣ

i) ಆಯೋಗದ ಸರ್ವೆ ಪ್ರಕಾರ ರಾಜ್ಯದಲ್ಲಿ ಒಟ್ಟು ಜನಸಂಖ್ಯೆಯ ಶೇ.33ರಷ್ಟು ಮಾತ್ರ ಹಿಂದುಳಿದ ವರ್ಗಗಳಿಗೆ ಸೇರಿದವರು ಎಂದು ನಿರ್ಧರಿಸಲಾಗಿದೆ, ಎ ಗುಂಪಿನಲ್ಲಿ 15 ಜಾತಿ ಶೇ. 17.77, ಬಿ ಗುಪಿನಲ್ಲಿ 20 ಜಾತಿ ಶೇ 15.21 ಹೀಗೆ ಒಟ್ಟು ಶೇ. 33.98 (ಕ್ರಿಶ್ಚಿಯನ್ ಪರಿಶಿಷ್ಟ ಜಾತಿ ಮತಾಂತರಿಗಳು ಸೇರಿ)

ii) ಆಯೋಗವು ರಾಜ್ಯದಲ್ಲಿ ಒಟ್ಟು ಜನಸಂಖ್ಯೆಗೆ ಸಾಪೇಕ್ಷವಾಗಿ ಮೀಸಲಾತಿ ಶೇ. 27 ಇರಬೇಕೆಂದು ನಿರ್ಧರಿಸಲಾಯಿತು. ಎ ಗುಂಪಿನಲ್ಲಿ 13 (4) ಕಲಂ ಮೇರೆಗೆ ಶೇ. 14 ಬಿ ಗುಂಪಿನಲ್ಲಿ 15 (4) ಕಲಂ ಮೇರೆಗೆ ಶೇ. 13. ಒಟ್ಟು ಶೇ, 27.

iii) 16 (4) ಕಲಂನ ಅನ್ವಯ ಸಾಮಾಜಿಕವಾಗಿಯೂ ವಿದ್ಯಾಭ್ಯಾಸ ದೃಷ್ಟಿಯಿಂದಲೂ ಹಿಂದುಳಿದ ಜಾತಿಗೆ ಸೇರಿದ ಮತ್ತು ಸರಕಾರದ ನೌಕರಿ ವರ್ಗದಲ್ಲಿ ಈಗ ಬಹಳ ಕಡಿಮೆ ಪ್ರಾತಿನಿಧ್ಯವಿರುವ ಜಾತಿಗಳಿಗೆ ಹೆಚ್ಚು ಮಿಸಲಾತಿ ಶೇಕಡವಾರನ್ನು ನಿರ್ವಾನಿಸುವ ಅಧಿಕಾರ ವಿದೆ.

ಎ. ಗುಂಪಿನಲ್ಲಿ 12 ಜಾತಿಗಳಗೆ ಶೇ. 14 ಮತ್ತು ಬಿ ಗುಂಪಿನಲ್ಲಿ 19 ಜಾತಿ ಶೇ 13 ಹೀಗೆ ಒಟ್ಟು 31 ಜಾತಿಗಳನ್ನು ಸೇರಿಸಲಾಗಿದೆ.

iV) ಹಿಂದುಳಿದ ವರ್ಗಗಳಿಗೆ ಮೀಸಲಾತಿ ಪ್ರಮಾಣವು ಭಡ್ತಿಗೂ ಪರಿಗಣಿಸಲ್ಪಡಬೇಕು.

V) 15(4) ಮತ್ತು 16(4) ಪ್ರಕಾರ ಮೀಸಲಾತಿ ಪಡೆಯುವವರ ಹೆತ್ತವರ ಆದಾಯ ಪರಿಮಿತಿ ವಾರ್ಷಿಕ ರೂ 15,000 ದಲ್ಲಿ ನಿರ್ಧರಿಸಲಾಯಿತು.

Vi) ತಾತ ಮತ್ತು ತಂದೆ ಇಬ್ಬರೂ (ಅಂದರೆ ಎರಡು ತಲೆ ಮಾರಿನ ವರಿಗೆ) 15 (4) ಮತ್ತು 16 (4) ಪ್ರಕಾರ ಮಿಸಲಾತಿ ಪಡೆದಿದ್ದರೆ ಅವರ ಮಕ್ಕಳಿಗೆ ಈ ಮೀಸಲಾತಿ ಅನ್ವಯವಾಗುವುದಿಲ್ಲ.

Vii) ಯಾವುದೇ ಜಾತಿಗಳವರು ಏಕ ಕಾಲದಲ್ಲಿ ಎರಡು ರಿಯಾಯಿತಿಗಳನ್ನು ಪಡೆಯಲು ಸಾಧ್ಯವಿಲ್ಲ.

Viii) ಹಿಂದುಳಿದ ವಿಶಿಷ್ಟ ಗುಂಪಿಗೆ B S G ಶೇ 15 ರಷ್ಟು ಮಿಸಲಾತಿ ಇದ್ದುದನ್ನು ರದ್ದು ಪಡಿಸಲಾಗಿದೆ.

ಹೀಗೆ ಒಟ್ಟಿನಲ್ಲಿ 81 ಶಿಫಾರಸುಗಳನ್ನು ಆಯೋಗವು ಮಾಡಿದೆ. ●

ವೆಂಕಟಸ್ವಾಮಿ ಆಯೋಗ ಕೈಬಿಟ್ಟ ಜಾತಿಗಳು ಹಾಗೂ ಜನಸಂಖ್ಯೆ

ಜಾತಿ	ಜನಸಂಖ್ಯೆ	ಜನಸಂಖ್ಯೆಯ ಪ್ರಮಾಣ
ಬಲಿಜ	4,79,905	1.33
ದರ್ಜಿ	1,17,872	0.33
ದೇವಾಂಗ	2,68,146	0.74
ಗಾಣಿಗ	1,62,412	0,45
ನೆಯ್ಗಿ	2,34,882	0.65
ಪಟೇಗಾರ್	15,472	0.04
ರಾಜಪೂತ	55,851	0.15
ಸತಾನಿ	20.934	0.16
ವಿಶ್ವಕರ್ಮ	7,08.886	1.96
ಒಕ್ಕಲಿಗ	42,17,520	11.68

ಹಿಂದುಳಿಕೆ ನಿರ್ಧಾರ ಹೇಗೆ?

17 ಸಾಮಾಜಿಕ-ಆರ್ಥಿಕ ಅಂಶಗಳ ಒಂದು ಪಟ್ಟಿಯನ್ನು ಮಾಡಿ ಅದಕ್ಕೆ ಸಂಬಂಧಿಸಿದ ಅಂಕಿಅಂಶಗಳನ್ನು ಜಾತಿವಾರಾಗಿ ಸಂಗ್ರಹಿಸಲು ಕರ್ನಾಟಕದ 1984ರ ಜನಸಂಖ್ಯೆಯ ಶೇ 90ಭಾಗ ಜನತೆಯನ್ನು ಆವರಿಸುವಂತೆ ಸಮೀಕ್ಷೆ ಮಾಡಿತು ವೆಂಕಟಸ್ವಾಮಿ ಆಯೋಗ. 1984ರ ಎಪ್ರಿಲ್‌ನಿಂದ ಜುಲೈವರೆಗೆ ನಡೆದ ಈ ಸಮೀಕ್ಷೆ ಬಗೆಗೆ ಕೂಡ ವಾದವಿವಾದಗಳಿದ್ದಿವೆ.

ಈ ಸೂಚಿಗಳಲ್ಲಿ ಎರಡು ಗಂಪುಗಳನ್ನು ಮಾಡಲಾಗಿದೆ. ಹಿಂದುಳಿಕೆಯನ್ನು ನಿರ್ಧರಿಸುವ ಧನಾತ್ಮಕ ಅಂಶಗಳು(Positive) ಹಾಗೂ ಋಣಾತ್ಮಕ ಅಂಶಗಳು (Negative) ಎಂದು. ಧನಾತ್ಮಕ ಅಂಶಗಳೆಂದರೆ ಆ ಅಂಶದಲ್ಲಿ ಯಾವುದೇ ಜಾತಿ ರಾಜ್ಯದ ಸರಾಸರಿಗಿಂತಲೂ ಹೆಚ್ಚಿದ್ದರೆ ಮಾತ್ರ ಹಿಂದುಳಿದ ಜಾತಿಗಳು ಎಂದು ಪರಿಗಣಿತವಾದರೆ ಋಣಾತ್ಮಕ ಅಂಶಗಳಲ್ಲಿ ಅವು ರಾಜ್ಯದ ಸರಾಸರಿಗಿಂತ ಕಡಿಮೆ ಇದ್ದರೆ ಮಾತ್ರ ಹಿಂದುಳಿದ ಅಂಶಗಳು ಎಂದು. ಉದಾಹರಣೆಗೆ ವಸತಿಯಿಲ್ಲದ, ಮನೆಯಿಲ್ಲದವರು ಎಂಬ ಅಂಶವನ್ನು ಪಕ್ಕಾ ಮನೆಗಳಿರುವವರು ಎಂಬ ಅಂಶ ತೆಗೆದುಕೊಳ್ಳೋಣ, ವಸತಿಹೀನರು ರಾಜ್ಯದಲ್ಲಿ 13.11 ರಷ್ಟು. ಯಾವುದೇ ಜಾತಿಯಲ್ಲಿ ಇದಕ್ಕಿಂತ ಹೆಚ್ಚು ವಸತಿಹೀನರಿದ್ದರೆ ಹಿಂದುಳಿದವರು ಎಂದು ಪರಿಗಣಿತವಾಗುತ್ತದೆ. ಪಕ್ಕಾ ಮನೆಗಳಿರುವವರು ರಾಜ್ಯದಲ್ಲಿಶೇ27.82ರಷ್ಟು. ಯಾವುದೇ ಜಾತಿಗೆ ಇದಕ್ಕಿಂತ ಹೆಚ್ಚು ಪ್ರಮಾಣದ ಪಕ್ಕಾ ಮನೆಗಳಿದ್ದರೆ ಅವರು ಮುಂದುವರಿದವರಾಗಿರುತ್ತಾರೆ.

		ರಾಜ್ಯದ ಸರಾಸರಿ
ಒಂದನೆಯ ಗುಂಪು		
1.	ಮನೆ-ವಸತಿಯಿಲ್ಲದವರು	13.11
2.	ಕಚ್ಚಾ ಮನೆಗಳಿರುವವರು	36.52
3.	ಒಂದು ಸ್ಟ್ಯಾಂಡರ್ಡ್ ಎಕರೆಗಿಂತ ಭೂಮಿ ಕಡಿಮೆ ಇರುವವರು	40.49
4.	5000 ರೂ. ವರಮಾನಕ್ಕಿಂತ ಕಡಿಮೆ ಇರುವವರು	70.70
5.	ಕೃಷಿ ಕೂಲಿಕಾರರು	13.02
6.	ನಿರಕ್ಷರಿಗಳು	40.97
7.	ಏಳನೇ ತರಗತಿಗಿಂತ ಮೊದಲೇ ಶಾಲೆ ಬಿಟ್ಟವರು	11.34
8.	ಉದ್ಯೋಗ-ನಾಲ್ಕನೆ ದರ್ಜೆ (ರಾಜ್ಯ ಸರಕಾರಿ ನೌಕರರಲ್ಲಿ)	0.36
ಎರಡನೇ ಗುಂಪು		
9.	ನಗರ ವಾಸಿಗಳು	25.80
10.	ಪಕ್ಕಾ ಮನೆಗಳಲ್ಲಿರುವವರು	27.82
11.	20,000 ಕ್ಕಿಂತ ಹೆಚ್ಚು ಆದಾಯವುಳ್ಳವರು	3.11
12.	20 ಸ್ಟ್ಯಾಂಡರ್ಡ್ ಎಕರೆಗಿಂತ ಹೆಚ್ಚು ಭೂಮಿಯುಳ್ಳವರು	6.88
13.	ಎಸ್.ಎಸ್.ಎಲ್.ಸಿ. ಯಲ್ಲಿ ಓದುತ್ತಿರುವವರು	1.68
14.	ಒಂದನೇ ದರ್ಜೆ ಅಧಿಕಾರಿಗಳು	0 08
15.	ಎರಡನೇ ದರ್ಜೆ ಅಧಿಕಾರಿಗಳು	0 21
16.	ಮೂರನೇ ದರ್ಜೆ ಅಧಿಕಾರಿಗಳು	0.83
17.	ಸ್ವ ಉದ್ಯೋಗದಲ್ಲಿರುವವರು	16.39

ರಾಜಕೀಯ-ಆರ್ಥಿಕ ಸಂಸ್ಥೆಗಳಲ್ಲಿ ಜಾತಿವಾರು ಪ್ರಾತಿನಿಧ್ಯ (ಶೇ.)

ಜಾತಿ	ಜನ ಸಂಖ್ಯೆ	ಪುರ ಸಭೆ	ತಾಲ್ಲೂಕು ಅಭಿವೃದ್ಧಿ ಮಂಡಳಿಗಳು	ಎಂ.ಎಲ್.ಎ. ಎಂ.ಪಿ.ಗಳು	ಸಹಕಾರಿ ಕಾರ್ಖಾನೆಗಳು	ಸರ್ಕಾರೀ ಕಂಪನಿಗಳು ಆಡಳಿತ ಮಂಡಳಿಗಳು	ಸರ್ಕಾರೀಕೃಷಿ ಮಂಡಳಿಗಳು ಇತ್ಯಾದಿ	ಉತ್ಪನ್ನ ಮಾರುಕಟ್ಟೆ ಸಮಿತಿಗಳು
ವೀರಶೈವ	16.92	20.17	25.72	26.02	39.82	9.34	13.96	36.28
ಒಕ್ಕಲಿಗ	11.68	7,07	23.12	20.30	19.85	9.34	7.55	15.38
ಮುಸಲ್ಮಾನ	10.97	16.88	4.71	5.02	—	1.10	3.02	1.56
ಪರಿಷ್ಟ ಜಾತಿ	15,86	10.78	17.17	14.00	1.14	1.10	9.43	13.48
ಬ್ರಾಹ್ಮಣ	3.81	8.40	4.86	8,17	6.68	29.67	19.62	5.39
ಕುರುಬ	6.92	4,89	5.75	3.27	4.76	—	1.13	4.28

ಸ್ಕ್ಯಾಡ್ ಸಂಸ್ಥೆಯ ಅವ್ಯವಹಾರ-ತನಿಖೆಗೆ ಒತ್ತಾಯ

ಸ್ಕ್ಯಾಡ್ಸ್ ಸಂಸ್ಥೆಯ ಸದಸ್ಯರಿಂದಲೇ ಗಂಭೀರ ರೀತಿಯ ಅವ್ಯವಹಾರದ ಆಪಾದನೆಗೊಳಪಟ್ಟ ವಿವರವನ್ನು ಸರಕಾರವು ಕೂಡಲೇ ಸೂಕ್ತ ರೀತಿಯಲ್ಲಿ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಉಗ್ರ ಕ್ರಮ ಕೈಗೊಳ್ಳಬೇಕೆಂದು ಮಾರ್ಕ್ಸವಾದಿ ಕಮ್ಯೂನಿಸ್ಟ್ ಪಕ್ಷದ ಬಂಟ್ವಾಳ ತಾಲ್ಲೂಕು ಸಮಿತಿಯು ಸರಕಾರವನ್ನು ಒತ್ತಾಯಿಸಿದೆ.

ಈ ಬಗ್ಗೆ ಪಕ್ಷದ ಕಾರ್ಯದರ್ಶಿ ಶ್ರೀ ಬಿ. ವಾಸುಗಟ್ಟಿಯವರು ರಾಜ್ಯ ಸಹಕಾರ ಸಚಿವರಿಗೆ ಒಂದು ಮನವಿ ಪತ್ರ ಕಳುಹಿಸಿ ಎಲ್ಲಾ ಸಹಕಾರಿ ಸಂಘಗಳಲ್ಲಿ ಸಾಲದ ಸೌಲಭ್ಯದಲ್ಲಿ ರೈತರು ಪಡೆಯ ಬಯಸುವ ಪಂಪ್‌ಸೆಟ್ಟ್ ಪೈಪು, ಇತ್ಯಾದಿ ಸಲಕರಣೆಗಳನ್ನು ಸ್ಕ್ಯಾಡ್ಸ್‌ನಿಂದಲೇ ಖರೀದಿಸಬೇಕೆನ್ನುವ ನಿಯಮವನ್ನು ರದ್ದುಪಡಿಸಿ, ರೈತರಿಗೆ ಬೇಕಾದ ಕಡೆಗಳಿಂದ ಖರೀದಿಸುವ ಅನುಕೂಲತೆಗಳನ್ನು ಮಾಡಿಕೊಳ್ಳಲು ಸರಕಾರ, ಕೇಂದ್ರ ಸಹಕಾರಿ ಬ್ಯಾಂಕು ಮತ್ತು ಎಲ್ಲಾ ಸಹಕಾರಿ ಸಂಘಗಳಿಗೆ ನಿರ್ದೇಶನ ನೀಡಬೇಕೆಂದು ಒತ್ತಾಯಿಸಿದ್ದಾರೆ.

ರೈತ ಚಳುವಳಿ ಹೊರಹೊಮ್ಮಬೇಕು

(3ನೇ ಪುಟದಿಂದ)

ಕರ್ನಾಟಕ ರಾಜ್ಯದಲ್ಲಿ ಬದಲಾವಣೆಯಾದ ರಾಜಕೀಯ ರೈತ ಕಾರ್ಮಿಕರ ಹೋರಾಟದಿಂದ ನರಗುಂದ ಚಳುವಳಿಗೆ ಈ ಚಾರಿತ್ರಿಕ ಮಹತ್ವ ಇದೆ ಎಂಬುದನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ.

ಜನರ ಹೋರಾಟದಿಂದಲೇ ಅಧಿಕಾರಕ್ಕೆ ಬಂದ ಜನತಾ ಸರಕಾರ ಹಲವಾರು ಚುನಾವಣಾ ಆಶ್ವಾಸನೆಗಳನ್ನು ಕೊಟ್ಟಿದೆ. ಕೆಲವೊಂದು ಸವಲತ್ತುಗಳನ್ನು ಮಾತ್ರ ರೈತರಿಗೆ ಒದಗಿಸಿ ರೈತರ ಮೂಲಭೂತ ಪ್ರಶ್ನೆಗಳನ್ನು ಬಗೆಹರಿಸಲು ಸಾಧ್ಯವಿಲ್ಲ. ಯಾಕೆಂದರೆ ಇದು ಕೂಡ ಬಂಡವಾಳಶಾಹಿ ಭೂಮಾಲಿಕರ ಪಕ್ಷವೆಂಬುದನ್ನು ಮರೆಯಲಾಗದು.

ಇಂತಹ ಚಾರಿತ್ರಿಕ ಹಿನ್ನೆಲೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ವಿಧಾನ ಸೌಧ ಚಲೋ ಕರೆ ಕೊಟ್ಟಿದೆ. ಹೋರಾಟದ ಅನುಭವ ಪರಂಪರೆ ಹೊತ್ತ ರಾಜ್ಯದ ರೈತಾಪಿ ಜನತೆಯನ್ನು ಕೃಷಿಕೂಲಿಕಾರ-ಬಡರೈತ ನೇತೃತ್ವದಲ್ಲಿ ಮಧ್ಯಮರೈತ-ಶ್ರೀಮಂತ ರೈತರನ್ನು ಒಳಗೊಳ್ಳುವಂತೆ ವ್ಯಾಪಕ ಚಳುವಳಿಯನ್ನು ನಡೆಸಿ ಕಾಂಗ್ರೆಸ್ ಕೇಂದ್ರ ಸರಕಾರದ ಗುತ್ತೇದಾರಿ ಶ್ರೀಮಂತರ ಪರ ನೀತಿಯನ್ನು ವಿರೋಧಿಸಲು ಜನತಾ ಸರಕಾರ ಚುನಾವಣ ಆಶ್ವಾಸನೆಗಳನ್ನು ಕರ್ನಾಟಕ ಪ್ರಾಂತ ರೈತ ಸಂಘದ ಹತ್ತು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಲು ಕರೆಕೊಡುತ್ತದೆ. ಈ ಧೀರೋದ್ಧಾತ್ತ ಚಳುವಳಿಯ ಮುಖಾಂತರ ರಾಜ್ಯದ ರಾಜಕೀಯವನ್ನು ಎಡ ಮತ್ತು ಪ್ರಜಾಸತ್ತಾತ್ಮಕ ದಿಕ್ಕಿನತ್ತ ಕೊಂಡೊಯ್ಯಲು ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸಮಿತಿ ಕರೆ ಕೊಡುತ್ತದೆ.

ವಿಶ್ವಶಾಂತಿ ದಿನಾಚರಣೆ

(3ನೇ ಪುಟದಿಂದ)

ತಡೆಗಟ್ಟುವ ಏಕಮಾತ್ರ ಉದ್ದೇಶದಿಂದ ಕೂಡಿದ್ದು. ಇದು ಬರಿಯ ಅಸ್ತ್ರಗಳಿಂದ ಸಾಧ್ಯವಿಲ್ಲ. ಯುದ್ಧದ ವಿರುದ್ಧ ಜನ ಜಾಗೃತಿ ಮೂಡಿಸಬೇಕೆಂದು ಅವರು ಕರೆಯಿತ್ತರು. ಈ ದಿಕ್ಕಿನಲ್ಲಿ ಭಾರತ ಅಲಿಪ್ತ ರಾಷ್ಟ್ರ ಚಳುವಳಿಯ ಭಾಗವಾಗಿ ಕೈಗೊಂಡಿರುವ ಕ್ರಮಗಳನ್ನು ಭಾಗವಹಿಸಿದರೂ ವಿಶ್ವಶಾಂತಿಗೆ ಜನ ಆಂದೋಲನ ಸಂಘಟಿಸಲು ಪ್ರಯತ್ನಿ ಯುದ್ಧಕ್ಕೆ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಆಫ್ರಿಕನ್ ರಾಷ್ಟ್ರೀಯ ಕಾಂಗ್ರೆಸ್ (ANC)ಯ ಪ್ರತಿನಿಧಿ ಡಾ॥ ಮೂಸಾ ಮೊಲ್ಲಾ ಈ ಸಭೆಯಲ್ಲಿ ಭಾಗವಹಿಸಿದ್ದು ಒಂದು ವಿಶೇಷವಾಗಿತ್ತು. ಅವರ ANC ವರ್ಣಭೇಧ ವಿರೋಧಿ ನೀತಿ ಹೋರಾಟದಲ್ಲಿ ಬೇರೆ ಬೇರೆ ಹಂತಗಳಲ್ಲಿ ವಿಕಾಶಹೊಂದಿದ ರೀತಿ ಮತ್ತು ಈಗಿನ ಸಶಸ್ತ್ರ ಹೋರಾಟದ ಅನಿವಾರ್ಯತೆಯ ಬಗ್ಗೆ ಒತ್ತಿ ಹೇಳಿದರು. ವಿಯೆಟ್ನಾಂ, ಮೊಸಾಂಬಿಕ್ ಮತ್ತು ಅಂಗೋಲಗಳಲ್ಲಿ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟಗಳ ವಿಜಯ ANCಗೆ ಸ್ಫೂರ್ತಿದಾಯಕವಾಗಿದೆ ಎಂದರು.

ಸಿ. ಐ. ಟಿ. ಯು. ಕಾರ್ಯದರ್ಶಿ ಮನೋರಂಜನ ರಾಯ್ ಏಳು ಅಂಶಗಳ ಕಾರ್ಯಕ್ರಮ ಮಂಡಿಸಿದರು. ಇವುಗಳಲ್ಲಿ ತಾರಸಮ.ರ ಕಾರ್ಯಕ್ರಮ ಮತ್ತು ಪರಮಾಣು ಅಸ್ತ್ರ ಪರೀಕ್ಷೆಗೆ ಕೈಬಿಡಲು ನೆಲ್ಸನ್ ಮಂಡೆಲಾ ಬಿಡುಗಡೆಗೆ ನಿಕರಾಗುವ ಮೇಲೆ ಆಕ್ರಮಣ ನಿಲ್ಲಿಸಲು ಮತ್ತು ದ. ಆಫ್ರಿಕಾದ ಮೇಲೆ ಆರ್ಥಿಕ ದಿಗ್ಬಂಧನ ಹೊರಿಸಲು ಒತ್ತಾಯಗಳು ಸೇರಿವೆ.

ಏಳು ಅಂಶಗಳ ಕಾರ್ಯಕ್ರಮವನ್ನು AITUC, UTUC, TUCC ಇತ್ಯಾದಿ ನಾಯಕರು ಸಮರ್ಥಿಸಿ ಮಾತನಾಡಿದರು. ರೀಗನ್‌ನ ಪ್ರತಿಕೃತಿ ದಹನ ಮತ್ತು ಡಾ॥ ಮೂಸಾ ಮುಲ್ಲಾ ಜಲಿಯನ್‌ವಾಲಾ ಬಾಗ್‌ನ ಹುತಾತ್ಮರ ಬಗ್ಗೆ ಹಿಂದೀ ಹಾಡು ಹಾಡಿದ್ದು ಸಮಾರಂಭದ ವಿಶೇಷ ಆಕರ್ಷಣೆಯಾಗಿತ್ತು.

ಮರುದಿನ ನೆಲ್ಸನ್ ಮಾಂಡೆಲಾಗೆ ಕಲ್ಕತ್ತಾ ವಿ. ವಿ. ನೀಡಿದ ಗೌರವ ಡಾಕ್ಟರೇಟ್‌ನ್ನು ಡಾ॥ ಮೂಸಾ ಮೊಲ್ಲಾ ಸ್ವೀಕರಿಸಿದರು. ○

ಕಾಲೇಜುಗಳು-ಕಾರ್ಪೊರೇಟರುಗಳು

ಬೆಂಗಳೂರು ಮಹಾ ನಗರದಲ್ಲಿ ಯಡಿಯೂರು ಎಂಬ ಒಂದು ಭಾಗವಿದೆ, ಇಲ್ಲೊಬ್ಬರು ನಗರಸಭಾ ಸದಸ್ಯರು. ಬ್ಯಾಟಪ್ಪ ಎಂದು ಈ ಮಹನೀಯನ ಹೆಸರು. ಈತನಿಗೆ ಅರಮನೆಯೋಪಾಧಿಯಲ್ಲಿರುವ ಬಂಗಲೆ, ಅದೇ ರೀತಿ ಅನೇಕ ಕಡೆ ಇರುವ ಮನೆ, ಸಾಲದಂತೆ ಈ ಮನೆಯ ಬಳಿಯಲ್ಲಿರುವ ಪ್ರಾಥಮಿಕ ಶಾಲೆಯಿಂದ ಜ್ಯೂನಿಯರ್. ಕಾಲೇಜಿನ ವರೆಗೂ ಇರುವ ಸರ್ಕಾರಿ ವಿದ್ಯಾಸಂಸ್ಥೆಯಲ್ಲಿ ಇರುವುದು ಕೇವಲ 6 ಕೊಠಡಿಗಳು. ಅದರಲ್ಲಿ ಎರಡನ್ನು ಈ ನಗರಸಭಾ ಸದಸ್ಯ ಹಾಳುಮಾಡಿ ಇದೇ ಶಾಲೆಯ ಆವರಣದಲ್ಲಿ ತನ್ನ ಸೀಮೆ ಹಸುಗಳನ್ನು ಸಾಕುವ ಕೊಟ್ಟಿಗೆಯನ್ನಾಗಿ ಪರಿವರ್ತಿಸಿದ್ದಾನೆ. ಅಲ್ಲಿಯ ಚಿತ್ರ ಕರುಣಾಜನಕವಾಗಿದೆ. ಈ ಹಿಂದೆ ಬಗ್ಗೆ ಚರ್ಚಿಸಲು ಹೋದ ಎಸ್ ಎಫ್.ಐ ನ ನಿಯೋಗದವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ

ಚಳಿ, ಮಳೆ, ಗಾಳಿ, ಬಿಸಿಲೆನ್ನದೆ ಪಾಠ ಕೇಳಲು ಕಾತರರಾಗಿರುವ ವಿದ್ಯಾರ್ಥಿಗಳನ್ನು ಇಲ್ಲಿ ನೋಡಬಹುದು. ಒಂದನೇ ತರಗತಿಯಿಂದ ಐದನೆ ತರಗತಿವರೆಗೆ ಸುಮಾರು 800, ಹೈಸ್ಕೂಲ್ ಮತ್ತು ಕಾಲೇಜನ್ನು ಸೇರಿಸಿ 500 ವಿದ್ಯಾರ್ಥಿಗಳು ಒಟ್ಟು 1,300 ವಿದ್ಯಾರ್ಥಿಗಳು ಓದುವ ಕಾಲೇಜಿನಲ್ಲಿ ಯಾವ ಸೌಕರ್ಯವೂ ಇರಲಿಲ್ಲ. 800 ವಿದ್ಯಾರ್ಥಿಗಳು ಮರದ ಕೆಳಗೆ ಪಾಠ ಕೇಳಬೇಕಾದಂತ ಸ್ಥಿತಿ.

ಕಾಲ್ನಡಿಗೆ ಜಾಥಾ : ಈ ಶಾಲಾ ಕಾಲೇಜಿನಸಮಸ್ಯೆಯನ್ನು ಕೂಲಂಕುಷವಾಗಿ ಅಧ್ಯಯನ ನಡೆಸಿ ಎಸ್.ಎಫ್.ಐ. ನಾಯಕರುಗಳು ಆ ವಿದ್ಯಾರ್ಥಿಗಳೊಟ್ಟಿಗೆ ಸತತ ಸಂಪರ್ಕ ಇರಿಸಿಕೊಂಡು ಸಾಮೂಹಿಕ ಸದಸ್ಯತ್ವದೊಂದಿಗೆ ಸಮಿತಿ ರಚಿಸಲಾಯಿತು. ಕೆಲವು ದಿನಗಳ ನಂತರ ಪೋಷಕರೊಟ್ಟಿಗೆ ಸಂಪರ್ಕವಿರಿಸಿಕೊಂಡು ಅವರೊಟ್ಟಿಗೆ ಚರ್ಚಿಸಿ ಹೋರಾಟ ಮುಂದುವರಿಸಲು ಪ್ರಯತ್ನಗಳು ನಡೆದವು.

ಪೋಷಕರ, ವಿದ್ಯಾರ್ಥಿಗಳ ಸಹಿ ಸಂಗ್ರಹ ಚಳುವಳಿ ನಡೆಸಲಾಯಿತು. ಒಳ್ಳೆ ಪ್ರತಿಕ್ರಿಯೆ ಕಂಡುಬಂತು 10-12-85 ರಂದು ಉರಿಬಿಸಿಲಿನಲ್ಲಿ ಚಪ್ಪಲಿ ಇಲ್ಲದ ಪುಟ್ಟ ಕಾಲುಗಳ ವಿದ್ಯಾರ್ಥಿಗಳು ಕಾಲ್ನಡಿಗೆ ಜಾಥಾದಲ್ಲಿ ಸುಮಾರು 8 ಕಿ. ಮೀ. ನಡೆದು ಮೇಯರ್ ಬಳಿ ಬಂದರು. ಕುಡಿಯುವ ನೀರು, ಉಪಾಧ್ಯಾಯರ ಕೊರತೆ, ಮುಖ್ಯವಾಗಿ ಶಾಲಾ ಕಟ್ಟಡ ಮುಂತಾದ ಸಮಸ್ಯೆಗಳಿಗಾಗಿ ನಡೆದ ಜಾಥಾ ಇದು. ಎಸ್. ಎಫ್. ಐ. ನಿಯೋಗ ಅಧಿಕಾರಿಗಳನ್ನು ಭೇಟಿ, ಮಾಡಿದಾಗ ಸಮಸ್ಯೆ ಈಡೇರಿಸುವುದಾಗಿ ಆಶ್ವಾಸನೆ ಕೊಟ್ಟರು.

ಸಹಿ-ಸಂಗ್ರಹ, ನಿಯೋಗದ ಭೇಟಿ, ಕಾಲ್ನಡಿಗೆ ಜಾಥಾ ಹೀಗೆ ಹಲವಾರು ಹೋರಾಟಗಳ ನಂತರ ಕೆಲವು ಸಮಸ್ಯೆ ಈಡೇರಿತು. ಈಗ ಶಾಲಾ-ಕಾಲೇಜಿನ ಆವರಣದ ಒಳಗೆ ಒಂದು ಬೋರ್ ವೆಲ್ ಹಾಕಿಸಿದ್ದಾರೆ. ಇದರಿಂದ ನೀರಿಗಾಗಿ ಮನೆ ಮನೆಗೆ ಅಲೆಯುತ್ತಿದ್ದ ವಿದ್ಯಾರ್ಥಿಗಳ ಮನಸ್ಸು ತಣಿಯಿತು. ನಂತರ ಈ ಕಾಲೇಜಿಗಾಗಿ ರೂ. 9,52'000 ಮಂಜೂರು ಮಾಡಲಾಗಿದೆ ಎಂದು ಮೇಯರ್‌ರವರ ಪತ್ರಿಕಾ ಹೇಳಿಕೆ ಹೇಳಿದೆ. ಎಸ್.ಎಫ್.ಐ. ಈ ಹೋರಾಟ ದಿಂದ ಪಡೆದ ಫಲದಿಂದ ವಿದ್ಯಾರ್ಥಿಗಳು ಸ್ಫೂರ್ತಿಗೊಂಡು ಮತ್ತೆ ಎಸ್.ಎಫ್.ಐ. ನಿಯೋಗವೊಂದು 17-9-86 ರಂದು ಸಂಬಂಧಿಸಿದ ಅಧಿಕಾರಿಗಳನ್ನು ಭೇಟಿಮಾಡಿ ಕೂಡಲೇ ಕಟ್ಟಡ ಪ್ರಾರಂಭಿಸಲು ಒತ್ತಾಯ್ತಿಸಿದೆ. ಎಸ್. ಎಫ್ ಐ ನ ಎಲ್ಲಾ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ●

ಎಸ್. ಎಫ್. ಐ. ಚಟುವಟಿಕೆಗಳು

ಗುಲ್ಬರ್ಗ

ನೂತನವಾಗಿ ಆರಂಭವಾಗಿರುವ ಗುಲ್ಬರ್ಗ ವಿಶ್ವವಿಧ್ಯಾನಿಲಯದಲ್ಲಿ ವಿದ್ಯಾರ್ಥಿಗಳು ಅನುಭವಿಸುತ್ತಿರುವ ಕೆಲವಾರು ಸಮಸ್ಯೆಗಳ ಬಗ್ಗೆ ಆರ್. ಜಯಕುಮಾರ್ ನೇತೃತ್ವದಲ್ಲಿ ಎಸ್. ಎಫ್. ಐ. ನಿಯೋಗವೊಂದು ಉಪಕುಲಪತಿಯನ್ನು ಭೇಟಿ ಮಾಡಿ ಮನವಿ ಸಲ್ಲಿಸಿ ಸಮಸ್ಯೆಗಳ ಬಗ್ಗೆ ತ್ವರಿತವಾಗಿ ಗಮನ ಸೆಳೆಯುವಂತೆ ಒತ್ತಾಯಿಸಿತು.

ಬೀದರ್ :

29-8-1986 ರಂದು ಇಲ್ಲಿನ ಜಿಲ್ಲಾ ಸಂಘಟನಾ ಸಮಿತಿ ಸಭೆ ಸೇರಿ ಜಿಲ್ಲೆಯಲ್ಲಿ ಸಂಘಟನೆಯನ್ನು ವಿಸ್ತರಿಸುವ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ಈ ಸಭೆಯಲ್ಲಿ ಭಾಗವಹಿಸಿದ್ದ ಆರ್. ಜಯಕುಮಾರ್‌ರವರು ನೂತನ ಶಿಕ್ಷಣ ನೀತಿಯ ಜನವಿರೋಧಿ ಧೋರಣೆ ಹಾಗು ಜಾಗತಿಕ ಶಾಂತಿ ಚಳುವಳಿಯ ಮಹತ್ವದ ಬಗ್ಗೆ ವಿವರಿಸಿದರು. ಜಿಲ್ಲೆಯಲ್ಲಿ ವ್ಯಾಪಕವಾಗಿ ಸಂಘಟನೆ ಬೆಳೆಸಲು ಇಲ್ಲಿನ ವಿದ್ಯಾರ್ಥಿಗಳು ಉತ್ಸುಹಕರಾಗಿದ್ದಾರೆ.

ಬಿಜಾಪುರ

ಇಲ್ಲಿನ ಸಮಿತಿ ಸಭೆಯು 30-8-86 ರಂದು ನಡೆದ ವಿದ್ಯಾರ್ಥಿ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು. ಆರ್. ಜಯಕುಮಾರ್ ಮಾರ್ಗದರ್ಶನ ನೀಡಿದರು.

ಸುಳ್ಯ

ಕರ್ನಾಟಕ ರಾಜ್ಯ SFI ಯು ವಿದ್ಯಾರ್ಥಿಗಳ ಬೇಡಿಕೆಗಳು ಹಾಗೂ ಹೊಸ ಶಿಕ್ಷಣ ಪದ್ಧತಿ ಮತ್ತು ಕ್ಯಾಪಿಟೇಶನ್ ಶುಲ್ಕ ಇವೇ ಮುಂತಾದವುಗಳ ವಿರುದ್ಧ ಚಳವಳಿ ನಡೆಸಲು ಕೊಟ್ಟ ಕರೆಯಂತೆ ಇತ್ತೀಚೆಗೆ ಸುಮಾರು 3,000 ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಸುಳ್ಯದ ಮುಖ್ಯ ಬೀದಿಗಳಲ್ಲಿ ಮೆರವಣಿಗೆಯನ್ನು ನಡೆಸಿ, ತಹಸಿಲ್ದಾರರಿಗೆ, ಹಾಗೂ ನೆಹರೂ ಮೆಮೋರಿಯಲ್ ಕಾಲೇಜ್‌ನ ಪ್ರಿನ್ಸಿಪಾಲರಿಗೆ ಬೇಡಿಕೆಯ ಮನವಿಯನ್ನು ಸಲ್ಲಿಸಿದರು.

ಸ್ಥಳಿಯ ಸಮಸ್ಯೆಗಳ ಪರಿಹಾರಕ್ಕಾಗಿ ಮನವಿ

ಭಾರತ ಪ್ರಜಾಸತ್ತಾತ್ಮಕ ಯುವ ಜನ ಫೆಡರೇಶನ್‌ನ ಕುಪ್ಪೆಪದವು ಪ್ರದೇಶ ವಲಯ ಸಮಿತಿಯು 5-9-86 ರಂದು ಕೊಳವೂರು, ಮುತ್ತೂರು, ಕೆಲೆಂಜಾರು ಗ್ರಾಮಗಳಿಗೆ ಸಂಬಂಧಿಸಿದ ಗ್ರಾಮಪಂಚಾಯಿತಿಯ ಗ್ರಾಮಕರಣಿಕರಿಗೆ ಸ್ಥಳೀಯ ಗ್ರಾಮಗಳಲ್ಲಿನ ಸಮಸ್ಯೆಗಳನ್ನು ಪರಿಹರಿಸಲು ಒತ್ತಾಯಿಸಿ ಮನವಿ ಅರ್ಪಿಸಿತು. ನಿಯೋಗದ ನೇತೃತ್ವವನ್ನು ಬಾಲಕೃಷ್ಣ ಶೆಟ್ಟಿ ಮತ್ತು ಸದಾಶಿವ ದಾಸ್‌ರವರು ವಹಿಸಿದ್ದರು. ○

ನಿಷ್ಠೆಯ, ಕರ್ತವ್ಯದ ಪ್ರತೀಕ ಬಿ. ನಾರಾಯಣ

ಬ್ರಿಟಿಷರೂ, ಅವರ ಜೊತೆಯಲ್ಲೇ ಹೆಂಚಿನ ಮಾಲೀಕರೂ ಕಾರ್ಮಿಕರ ನಿರಂತರ ಸುಲಿಗೆಯಲ್ಲಿ ತೊಡಗಿದ್ದಾಗ, ಜೀವದ, ನೌಕರಿಯ ಹಂಗು ಬಿಟ್ಟು ದುಡಿಯುವವರ ಸಂಕಷ್ಟಗಳ ಸಲುವಾಗಿ ಮಾಲೀಕರೆದುರು ಎತ್ತರಿಸಿದ ಧ್ವನಿಯಲ್ಲಿ ಮಾತನಾಡಬೇಕಾದಂಥ ಸಂದಿಗ್ಧ ಪರಿಸ್ಥಿತಿ ಇದ್ದಾಗ, ಮಂಗಳೂರಿನ ಹಂಚಿನ ಕಾರ್ಮಿಕರನ್ನು ಸಂಘಟಿಸಿ, ಹಲವಾರು ಹೋರಾಟಗಳನ್ನು ನಡೆಸಿ ಇಡೀ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಅತ್ಯಂತ ಬಲಿಷ್ಟವಾದ ಕೆಂಬಾವುಟದ ನೇತೃತ್ವದ ಸಂಘಟನೆ ಈಗಲೂ ಹೋರಾಟದ ಸಂಘಟನೆಯಾಗಿಯೇ ಉಳಿಯುವಂತೆ ಮಾಡಿದವರು ಬಿ. ನಾರಾಯಣ. ಕರ್ನಾಟಕದ ಹಲವಾರು ಪ್ರದೇಶಗಳಲ್ಲಿ ಮುಖ್ಯವಾಗಿ ದಕ್ಷಿಣ ಕನ್ನಡ. ಮಲೆನಾಡು ಪ್ರದೇಶಗಳಲ್ಲಿ ಈಗಲೂ ಮನೆಮಾತಾಗಿ ಉಳಿದು ನೆನೆಸಿಕೊಳ್ಳುವ ಹೋರಾಟಗಾರ ಬಿ ನಾರಾಯಣ.

ಹೆಚ್ಚು ಕಲಿತವರೇ ಹೆಸರುವಾಸಿ ಮುಖಂಡರಾಗುತ್ತಾರೆಂಬುದಕ್ಕೆ ಏ ಕೆ. ಗೋಪಾಲನ್, ಕೃಷ್ಣಪಿಳ್ಳೆಯವರಂತೆಯೇ ಬಿ. ನಾರಾಯಣ ಕೂಡ ಅಪವಾದವೇ ಸರಿ. ಕನ್ನಡ ಓದಲು ಬರೆಯಲು ಬಲ್ಲ ಬಿ. ನಾರಾಯಣ ಆಲ್ಬುಕರ್ಕ್ ಟ್ಯೈಲ್ ಫ್ಯಾಕ್ಟರಿಯಲ್ಲಿ ಕೆಲಸಮಾಡುತ್ತಿದ್ದರು. ಆಗ ದೇಶಾದ್ಯಂತ ಬಲಗೊಳ್ಳುತ್ತಿದ್ದ ಸ್ವಾತಂತ್ರ್ಯ ಹೋರಾಟ, ಆ ಹೋರಾಟದಿಂದ ಕಾರ್ಮಿಕರಲ್ಲಿ ಕೆಲವರಿಗೆ ಹೋರಾಡಲು ಸ್ಫೂರ್ತಿ. ಅಂಥ ಸ್ಫೂರ್ತಿ ಪಡೆದು ಹೆಂಚಿನ ಕಾರ್ಮಿಕರನ್ನು ಸಂಘಟಿಸಿ ಅವರನ್ನು ಹೋರಾಟಕ್ಕಿಳಿಸಿದವರು ಬಿ. ನಾರಾಯಣ. ಅವರಿಗೆ ಬೆನ್ನೆಲುಬಾಗಿ ನಿಂತು ಮಾರ್ಗದರ್ಶನ ಮಾಡಿದವರು ಎಸ್. ಎನ್. ಹೊಳ್ಳ. ಬಿ.ವಿ. ಕಕ್ಕಿಲ್ಲಾಯ, ಕೃಷ್ಣಶೆಟ್ಟಿ ಮೊದಲಾದವರು. 1944 ರಲ್ಲಿ ಕೃಷ್ಣ ಶೆಟ್ಟಿಯವರು ಹೆಂಚಿನ ಕೆಲಸಗಾರರ ಸಂಘದ ಅಧ್ಯಕ್ಷ, ಬಿ. ನಾರಾಯಣ ಪ್ರಧಾನ ಕಾರ್ಯದರ್ಶಿ, ಆಗಲೇ ಬಂತು ಮಾಲೀಕರ ಗಧಾ ಪ್ರಹಾರ. "ನೀನು ಕಾರ್ಮಿಕರನ್ನು ಸಂಘಟಿಸಿದ್ದೀಯೇ, ತಗೋ ನಮ್ಮ ಪಾರಿತೋಷಕ, ನಿನ್ನನ್ನು ಕೆಲಸದಿಂದ ತೆಗೆದು ಹಾಕಿದ್ದೇನೆ". ಆದರಿಂದ ನಿರಾಶರಾಗಲಿಲ್ಲ ಬಿ. ನಾರಾಯಣ. ಮೈಯಲ್ಲಿ ಹೊಸ ರಕ್ತ ತುಂಬಿದಂತಾಯಿತು. "ಬ್ರಿಟಿಷರನ್ನೂ ಓಡಿಸಬೇಕು, ಮಾಲೀಕರ ಸುಲಿಗೆಯಿಂದ ಕಾರ್ಮಿಕರನ್ನೂ ರಕ್ಷಿಸಬೇಕು. ನಡೆ ಮುಂದೆ, ಸಂಘಟನೆ ಬಲಪಡಿಸೋಣ, ವಿಸ್ತಾರಗೊಳಿಸೋಣ" ಎಂಬ ಗರ್ಜನೆ ಮೊಳಗಿತು. ಮಂಗಳೂರಿನಲ್ಲಿ ಹಲವಾರು ಸಂಘಟನೆಗಳು ತಲೆ ಎತ್ತಿದವು. ರೈತ ಸಂಘಟನೆಯೂ ಬೆಳೆದು ಬಂತು. ಆ ಕೂಗು ಜಿಲ್ಲಾದ್ಯಂತ ಹಬ್ಬಿತು. ನೆರೆಯ ಮಲಬಾರ್ ಪ್ರದೇಶದ ರೈತರ ಹೋರಾಟ ಈ ಕೂಗಿಗೆ ಪುಟಕೊಟ್ಟಿತು ಬ್ರಿಟಿಷರ, ಮಾಲಕರ ದಬ್ಬಾಳಿಕೆಗಳನ್ನೆದುರಿಸಿ ಮಂಗಳೂರು ಜಿಲ್ಲೆಯಲ್ಲಿ ಕಾರ್ಮಿಕರ ಚಳುವಳಿ ಮುಂದುವರಿಯಿತು. ಅವುಗಳಿಗೆಲ್ಲ ಮುಖಂಡತ್ವ ನೀಡಿದವರಲ್ಲಿ ಬಿ. ನಾರಾಯಣ ಪ್ರಮುಖರು.

1958 ರಲ್ಲಿ ಜಿಲ್ಲೆಯಾದ್ಯಂತ ಹಬ್ಬಿದ ಹಂಚಿನ ಕಾರ್ಖಾನೆಗಳಲ್ಲಿ ಕಾರ್ಮಿಕ ಸಂಘಟನೆ ಕಟ್ಟಿ 1958ರಲ್ಲಿ ಸೌತ್ ಕೆನರಾ ಟೈಲ್ ವರ್ಕರ್ಸ್ ಯೂನಿಯನ್ ಸ್ಥಾಪಿಸಲಾಯಿತು. ಈ ಸಂಘಟನೆಯ ಪ್ರಥಮ ಅಧ್ಯಕ್ಷರಾಗಿ ಅನಂತರ ಕಾರ್ಯದರ್ಶಿಯಾಗಿ ಉಪಾಧ್ಯಕ್ಷರಾಗಿ 1981 ರ ತನಕವೂ ದುಡಿದಿದ್ದರು ತಾವು ಅಧ್ಯಕ್ಷರಾಗಿದ್ದಾಗಲೇ 1959 ರಲ್ಲಿ ಮಂಗಳೂರಿನಲ್ಲಿ ಈಗಲೂ ಭವ್ಯವಾಗಿ ಮೆರೆಯುತ್ತಿರುವ ಕಾರ್ಮಿಕ ರೈತರ ಹೋರಾಟದ ನೆಲೆಯಾಗಿರುವ ಎಸ್. ಕೆ. ಟೈಲ್ ವರ್ಕರ್ಸ್ ಯೂನಿಯನ್ ಕಟ್ಟಡ ನಿರ್ಮಿಸಿ ಸ್ಮರಣೀಯ ಕರ್ತವ್ಯ ನೆರವೇರಿಸಿದರು.

ಕಾರ್ಮಿಕ ಚಳುವಳಿಯಲ್ಲಿ ಬೆಳೆದು ಬಂದ ಈ ವ್ಯಕ್ತಿ, ಕಾರ್ಮಿಕರ ವಿಮೋಚನೆಯಾಗಬೇಕಾದರೆ ಬರೇ ಟ್ರೇಡ್ ಯೂನಿಯನ್‌ನಿಂದ ಮಾತ್ರ ಸಾಧ್ಯವಿಲ್ಲ. ಕಮ್ಯೂನಿಸ್ಟ್ ಪಕ್ಷ ಕಟ್ಟಬೇಕು. ಕಾರ್ಮಿಕ ವರ್ಗದ ಮುಖಂಡತ್ವದಲ್ಲಿ ಕ್ರಾಂತಿ ಮಾಡಬೇಕೆಂಬ ತಿಳುವಳಿಕೆ ಪಡೆದು ಕಮ್ಯೂನಿಸ್ಟ್ ಪಕ್ಷ ಸೇರಿ, ಪಕ್ಷದ ಸಂಘಟನೆಯಲ್ಲೂ ಪ್ರಧಾನ ಪಾತ್ರ ವಹಿಸಿದ್ದರು. ಇಡೀ ಕರ್ನಾಟಕದಲ್ಲಿಯೇ ಬಲಿಷ್ಟವಾದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ದ. ಕ. ಜಿಲ್ಲೆಯಲ್ಲಿ ಇಂದು ಕಾಣುತ್ತಿದ್ದರೆ ಅದರಲ್ಲಿ ಬಿ. ನಾರಾಯಣ ಅವರ ಶ್ರಮ ಬಹಳವಿದೆಂಬುದನ್ನು ಮರೆಯುವಂತಿಲ್ಲ. ಪರಿಷ್ಕರಣವಾದದ ವಿರುದ್ಧ ಹೋರಾಟದಲ್ಲಿಯೂ ಇವರದು ಪ್ರಧಾನ ಪಾತ್ರ. ದ. ಕ. ಜಿಲ್ಲೆಯ ಬಹು ಸಂಖ್ಯ ಪಕ್ಷದ ಸದಸ್ಯರನ್ನೂ, ಕಾರ್ಮಿಕ ಸಂಘಟನೆಗಳನ್ನೂ ಹಾಗೆಯೇ ಎಸ್. ಕೆ. ಟೈಲ್ ವರ್ಕರ್ಸ್ ಯೂನಿಯನ್‌ನ ಕಟ್ಟಡವನ್ನು ಪರಿಷ್ಕರಣವಾದಿಗಳಿಂದ (ಅದರಲ್ಲಿ ಬಹಳಷ್ಟು ಸುಶಿಕ್ಷಿತ ಮುಖಂಡರಿದ್ದರೂ ಕೂಡ) ರಕ್ಷಿಸುವುದರಲ್ಲಿ ಬಿ. ನಾರಾಯಣ ಅವರ ಪಾತ್ರ ಪ್ರಧಾನವಾಗಿತ್ತು.

ಪ್ರಾರಂಭದಿಂದಲೂ ಇವರು ಕಮ್ಯುನಿಸ್ಟ್ ಪಕ್ಷದ ರಾಜ್ಯ ಮಂಡಳಿಯ ಸದಸ್ಯರಾಗಿದ್ದರು. ಪರಿಷ್ಕರಣ ವಾದಿಗಳನ್ನು ಬೇರ್ಪಡಿಸಿ, 1964 ರಲ್ಲಿ ಕಲ್ಕತ್ತದಲ್ಲಿ ಸೇರಿದಪ್ರಥಮ ಸಮ್ಮೇಳನ (ಅಂದರೆ ಕಮ್ಯುನಿಸ್ಟ್ ಪಕ್ಷದ 7ನೇ ಕಾಂಗ್ರೆಸ್)ದಲ್ಲಿ ಇವರೂ ಕರ್ನಾಟಕದ ಪ್ರತಿನಿಧಿಗಳಲ್ಲೊಬ್ಬರಾಗಿದ್ದರು. 1981ರ ವರೆಗೂ ಅವರು ಸಿ.ಪಿ.ಐ. (ಎಂ) ಕರ್ನಾಟಕ ರಾಜ್ಯ ಸಮಿತಿಯ ಸದಸ್ಯರಾಗಿ ಜವಾಬ್ದಾರಿ ಹೊತ್ತಿದ್ದರು ಅಖಿಲ ಭಾರತ ಕಾಂಗ್ರೆಸ್‌ಗಳಲ್ಲಿಯೂ ಪ್ರತಿನಿಧಿಯಾಗಿದ್ದರು.

ಎ.ಐ.ಟಿ.ಯು.ಸಿಯಲ್ಲಿಯೂ ಅವರು ಮಹತ್ವದ ಸ್ಥಾನಗಳಲ್ಲಿದ್ದರು ಕಾರ್ಮಿಕ ಸಂಘಟನೆಯನ್ನು ಪರಿಷ್ಕರಣವಾದದಿಂದ ಬಿಡುಗಡೆ ಮಾಡುವ ಕುರಿತು ಚರ್ಚಿಸಲು 1970 ರಲ್ಲಿ ವಾಸ್ಕೋ (ಗೋವಾ) ದಲ್ಲಿನಡೆದಎ.ಐ ಟಿ.ಯು.ಸಿ ಮುಖಂಡರ ಸಭೆಯಲ್ಲಿ ಇವರೂ ಪ್ರತಿನಿಧಿಯಾಗಿದ್ದರು. 1970 ರ ಮೇ ತಿಂಗಳಲ್ಲಿ ಕಲ್ಕತ್ತದಲ್ಲಿ ಸೇರಿದ್ದ ಪ್ರಥಮ ಸಿ.ಐ.ಟಿ.ಯು ಸಮ್ಮೇಳನದಲ್ಲೂ ಇವರು ಪ್ರತಿನಿಧಿಯಾಗಿ ಭಾಗವಹಿಸಿ, ಜನರಲ್ ಕೌನ್ಸಿಲಿಗೆ ಆರಿಸಿ ಬಂದರು. ಅನಂತರವೂ 3-4 ಸಲ ಅವರು ಜನರಲ್ ಕೌನ್ಸಿಲ್ ಸದಸ್ಯರಾಗಿ ಆಯ್ಕೆಯಾಗಿದ್ದರು. 1970 ಡಿಸೆಂಬರಿನಲ್ಲಿ ನಡೆದ ಸಿ.ಐ.ಟಿ.ಯು ಪ್ರಥಮ ರಾಜ್ಯ ಸಮ್ಮೇಳನದಲ್ಲಿ ಉಪಾಧ್ಯಕ್ಷರಾಗಿಯೂ, 1978ರ ಬೆಂಗಳೂರು ಸಮ್ಮೇಳನದಲ್ಲಿ ಖಜಾಂಚಿಯಾಗಿಯೂ, ಹರಿಹರ ಸಮ್ಮೇಳನದಲ್ಲಿ ರಾಜ್ಯ ಸಮಿತಿ ಸದಸ್ಯರಾಗಿಯೂ, ಆಯ್ಕೆಯಾಗಿ ರಾಜ್ಯದ ಕಾರ್ಮಿಕ ಸಂಘಟನೆ, ಹೋರಾಟಗಳಿಗೆ ಮಾರ್ಗದರ್ಶನ ನೀಡಿದರು.

1969ರಲ್ಲಿ ಕಲ್ಕತ್ತದಲ್ಲಿ ಸಿ.ಪಿ.ಐ (ಎಂ) ಕೇಂದ್ರ ಸಮಿತಿ ಏರ್ಪಡಿಸಿದ್ದ ಶಿಬಿರದಲ್ಲಿ ಪಾಲ್ಗೊಂಡಿದ್ದರು.

198೦ರಲ್ಲಿ ಉಡುಪಿಯಲ್ಲಿ ನಡೆದ ರಾಜ್ಯ ಮಂಡಳಿಯಲ್ಲಿ ದ.ಕ.ಜಿಲ್ಲೆಯ ಕಾರ್ಮಿಕ ಚಳುವಳಿಯ ಪೂರ್ಣಚಿತ್ರ ನೀಡುವ ಉತ್ತಮ ಪಾಠ ಹೇಳಿದ್ದರು.

ಜನರ ಮಧ್ಯೆ ಇವರು ಸಲ್ಲಿಸಿದ ಸೇವೆಯಿಂದಾಗಿ ಇವರು ಸತತವಾಗಿ 5 ಸಲ ಮಂಗಳೂರು ನಗರ ಸಭೆಯ ಸದಸ್ಯರಾಗಿ ಆಯ್ಕೆಯಾಗಿದ್ದರು.

1981 ರ ವರೆಗೆ ಇವರು ಸಿ.ಪಿ.ಐ (ಎಂ) ಕರ್ನಾಟಕ ರಾಜ್ಯ ಸಮಿತಿ ಸದಸ್ಯರಾಗಿದ್ದು, ಅನಾರೋಗ್ಯದಿಂದಾಗಿ ಅನಂತರ ಸಕ್ರಿಯ ಚಟುವಟಿಕೆಗಳಲ್ಲಿ ಭಾಗವಹಿಸಲು ಸಾಧ್ಯವಿಲ್ಲದಾಯಿತು. ಕೊನೆಯುಸಿರೆಳೆಯುವ ವರೆಗೂ ಅವರು ತಮ್ಮ ಅನಾರೋಗ್ಯವನ್ನು ಕಡೆಗಣಿಸಿ, ಸಾಧ್ಯವಾದಷ್ಟು ಸಲಹೆಗಳನ್ನೂ ಸೂಚಿಸುತ್ತಿದ್ದರು.

ಹೆಂಚಿನ ಕಾರ್ಮಿಕರ ಸಮಸ್ಯೆಗಳ ಕುರಿತು ಇವರಷ್ಟು ಪಳಗಿದ ವ್ಯಕ್ತಿ ಮತ್ತೊಬ್ಬರಿಲ್ಲೆಂಬುದು ಎಲ್ಲರ ಅಭಿಪ್ರಾಯ. ಇವರು ಉತ್ತಮ ಭಾಷಣಕಾರರೂ, ಲೇಖಕರೂ, ಸರಳ ಜೀವಿಯೂ ಆಗಿದ್ದರು. ಬಿ. ನಾರಾಯಣ ಅವರ ಜೊತೆಯಲ್ಲಿ ಮಾತಾಡುವುದು, ಚರ್ಚಿಸುವುದೆಂದರೆ, ಸ್ವಲ್ಪ ಕಾಲ ಕಳೆಯುವುದೆಂದರೆ ದೇಶದ, ರಾಜ್ಯದ ರಾಜಕೀಯ, ಕಾರ್ಮಿಕರ ಹೋರಾಟದ ರೂಪ ರೇಖೆಗಳ ಕುರಿತು ಸ್ಪಷ್ಟ ನಿರೂಪಣೆಯ ಕೊಡ ತುಂಬಿಸಿಕೊಂಡಂತೆಯೇ ಸರಿ. ಯಾವ ಮುಲಾಜಿಗೂ ಬಲಿಯಾಗದ ವ್ಯಕ್ತಿ. ತನ್ನ ನಿಲುವುಯನ್ನು ಮಂಡಿಸುವುದರಲ್ಲಿ, ಸಮರ್ಥಿಸುವುದರಲ್ಲಿ ಹಿಂಜರಿಯದ ವ್ಯಕ್ತಿ. ದಬ್ಬಾಳಿಕೆಗಳಿಗೆ ಹೆದರದ ವ್ಯಕ್ತಿ ಒಪ್ಪಂದ ಸಾಧಿಸುವುದರಲ್ಲಿ ನಿಪುಣ.

ಹಲವಾರು ಸಲ ಅನಾರೋಗ್ಯದಿಂದ

(8ನೇ ಪುಟ ನೋಡಿ)

ಸಂತಾಪ ಸೂಚಕ ಸಭೆ

ಸೌತ್ ಕೆನರಾ ಟ್ಯೈಲ್ ವರ್ಕರ್ಸ್ ಯೂನಿಯನ್‌ನ ಕಾರ್ಯದರ್ಶಿಯಾಗಿ ಅಧ್ಯಕ್ಷರಾಗಿ ಹಾಗೂ ಸಂಘಟನೆಯಲ್ಲಿ ಮುಖ್ಯ ಪಾತ್ರ ವಹಿಸಿ ದುಂದು ಕಳೆದ 8 ವರ್ಷಗಳಿಂದ ಆರೋಗ್ಯ ನಿಮಿತ್ತ ಸಕ್ರಿಯವಾಗಿ ಭಾಗವಹಿಸಲು ಸಾಧ್ಯವಾಗದೆ ಇದ್ದು ತಾ| 7-9-86 ರಂದು ಮೃತರಾದ ಕಾ. ಬಿ. ನಾರಾಯಣರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲು ತಾ| 9-9-1986 ರಂದು ಯೂನಿಯನ್‌ನ ಅಧ್ಯಕ್ಷರಾದ ಕಾ. ಅಬ್ರಹಾಂ ಕರ್ಕಡರ ಅಧ್ಯಕ್ಷತೆಯಲ್ಲಿ ಬೋಳಾರದಲ್ಲಿ ಜರುಗಿದ ಸಭೆಯಲ್ಲಿ ಕಾ. ಡಿ. ಗೋಪಾಲ, ಕಾ. ಕೆ. ಮೂಸಬ್ಬ, ಕಾ. ಶಿವಾನಂದರು ಮಾತನಾಡಿ ದಿವಂಗತರು ಯೂನಿಯನ್‌ನ ಹಾಗೂ ಹೆಂಚಿನ ಕಾರ್ಮಿಕರ ಸಂಘಟನೆಗೆ ಸಲ್ಲಿಸಿದ ಸೇವೆಯನ್ನು ವಿವರಿಸಿದರು. ಸಭೆಯು ಎದ್ದು ನಿಂತು ದಿವಂಗತರಾದ ಕಾ. ಬಿ. ನಾರಾಯಣರಿಗೆ ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಿತು.

○

ಸಿ. ಐ. ಟಿ. ಯು. ಸಂತಾಪ

ಕಾಂ!! ಬಿ. ನಾರಾಯಣರವರು ಮಂಗಳೂರಿನಲ್ಲಿ 7-9-86 ರಂದು ನಿಧನರಾದರೆಂದು ಕೇಳಿ ಅತೀವ ದುಃಖವಾಯಿತು. ಕಾಂ॥ ಬಿ. ನಾರಾಯಣರು ಹೆಂಚಿನ ಕಾರ್ಖಾನೆಯಲ್ಲಿ ಕೆಲಸ ಮಾಡುವ ಒಬ್ಬ ಸಾಮಾನ್ಯ ಕಾರ್ಮಿಕರಾಗಿದ್ದವರು ಮಾರ್ಕ್ಸ್‌ವಾದ ಲೆನಿನ್ ವಾದದ ಕಡೆಗೆ ಆಕರ್ಷಿತರಾಗಿ 43 ವರ್ಷಗಳ ಹಿಂದೆ ಕಮ್ಯೂನಿಸ್ಟ್ ಪಕ್ಷದ ಸದಸ್ಯರಾದರು. ಪಕ್ಷದ ಎಲ್ಲಾ ಏರುಪೇರುಗಳ ಹಂತದ- 1948 ರಲ್ಲಿ ಪಕ್ಷದ ಮೇಲೆ ದಬ್ಬಾಳಿಕೆ, ನಿಷೇಧ, 1964 ರಲ್ಲಿ ಪರಿಷ್ಕರಣವಾದಿಗಳಿಂದ ದೂರವಾದುದು, 1967 ರಲ್ಲಿ ಎಡ ಸಾಹಸವಾದ ತಲೆಎತ್ತಿದಾಗ, 1978 ರಲ್ಲಿ ಪಕ್ಷದ ರಾಜ್ಯ ಸಮಿತಿ ಪುನರ್ ಸಂಘಟಿಸುವಾಗ, ಈ ಎಲ್ಲಾ ಸಂದರ್ಭಗಳಲ್ಲಿ ಅವರು ಧೃಢವಾಗಿ ಮಾರ್ಕ್ಸ್‌ವಾದ-ಲೆನಿನ್‌ವಾದದ ಪರವಾಗಿ ಎಲ್ಲಾ ಅಡ್ಡ ಹಾದಿಗಳ ವಿರುದ್ಧವಾಗಿ ನಿಂತು ಹೋರಾಡಿದರು. ಅವರು ಒಬ್ಬ ಸರಳ ವ್ಯಕ್ತಿಯಾಗಿದ್ದು ತಮ್ಮ ಎಲ್ಲಾ ಒಡನಾಡಿಗಳ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದು, ದ. ಕ. ಜಿಲ್ಲೆಯಲ್ಲಿ 1964 ರಲ್ಲಿ ಪರಿಷ್ಕರಣವಾದಿಗಳು ಮಾರ್ಕ್ಸ್‌ವಾದ-ಲೆನಿನ್‌ವಾದಕ್ಕೆ ದೊಡ್ಡ ಸವಾಲನ್ನು ಒಡ್ಡಿದಾಗ ಇತರ ಮುಖಂಡರನ್ನು ಕಾಂಗ್ರೆಸ್ ಸರ್ಕಾರ ಜೈಲಿನಲ್ಲಿಟ್ಟು ಕೆಲವರು ಭೂಗತರಾಗಿ ಕೆಲಸ ಮಾಡಬೇಕಾಗಿ ಬಂದಾಗ ಜಿಲ್ಲೆಯ ಮುಖ್ಯವಾದ ಸಾಮೂಹಿಕ ಸಂಘಟನೆಯಾದ ಸೌತ್ ಕೆನರಾ ಟೈಲ್ಸ್ ವರ್ಕರ್ಸ್ ಯೂನಿಯನ್ ಮತ್ತು ಅದರ ಸ್ವಂತ ಕಟ್ಟಡಗಳನ್ನು ಉಳಿಸಿಕೊಳ್ಳುವುದರಲ್ಲಿ ಅವರ ಪಾತ್ರ ಚಿರಸ್ಮರಣೀಯವಾಗಿದೆ. ತೀವ್ರ ಅನಾರೋಗ್ಯದಿಂದ ಅವರು 1982 ರ ನಂತರ ನಿವೃತ್ತರಾಗಿದ್ದರು. ಪಕ್ಷ ಹಾಗೂ ಕಾರ್ಮಿಕ ಸಂಘಟನೆಗಳ ಬೆಳವಣಿಗೆಗೆ ಅವರ ಕೊಡುಗೆ ಬಹಳ ಮುಖ್ಯವಾದದು. 1972 ರಲ್ಲಿ ಕಾ॥ ಎ. ಕೃಷ್ಣಶೆಟ್ಟರ ನಿಧನದಿಂದ ಮೊದಲುಗೊಂಡು ಕಾಂ!! ವಾಮನ ಕುಡಿಯಾಲಬೈಲ್, ಎ. ಕೆ. ನಾರಾಯಣ, ಬಿ. ಕೊರಗಪ್ಪರೈ, ಅವರ ನಂತರ ಪಕ್ಷದಲ್ಲಿ ಒಂದು ತಲೆಮಾರಿನ ನಾಯಕರು ಕಾಣದಂತಾಯಿತು. ಕಾಂ!! ಬಿ. ನಾರಾಯಣರ ಕುಟುಂಬದ ಸದಸ್ಯರಿಗೆ, ದ. ಕ. ಸಿ. ಪಿ. ಐ. (ಎಂ) ಮತ್ತು ಸಿ ಐ.ಟಿ.ಯು. ಮುಖಂಡರಿಗೆ ಮತ್ತು ಸದಸ್ಯರಿಗೆ ತನ್ನ ಮತ್ತು ರಾಜ್ಯ ಸಿ.ಐ.ಟಿ.ಯು ವಿನ ತೀವ್ರ ಸಂತಾಪವನ್ನು ವ್ಯಕ್ತ ಪಡಿಸುತ್ತೇನೆ.

ಸಿ. ನಂಜುಂಡಪ್ಪ

ಸಾಗುತಿರಲಿ ಈ ಸೃಷ್ಟಿ

ಜೀವ ಬಿಂದುಗಳ ಸ್ರವಿಸುವ
ಮುಗಿಲುಗಳ ಮರೆಯಿಂದ
ಕಾರಾ ಯುದ್ಧದ
ಯಮನ ಕಿಂಕರರು
ಇಳೆಯೊಳಗೆ ಇಳಿವ ಮುನ್ನ

ದಟ್ಟಧೂಮವನು ಸೃಷ್ಟಿಸಿ
ಸೂರ್ಯ ಕಿರಣಗಳ ತಡೆದು
ಉಸಿರುಗಟ್ಟಿಸಿ ರಕ್ತ ಹೆಪ್ಪುಗಟ್ಟಿಸಿ
ಎಲ್ಲವನ್ನೂ ತಣ್ಣಗೆ ಕೊಂದು
ಬಿಡುವ
ಅಣು ಬಾಂಬುಗಳು ಸಿಡಿವ ಮುನ್ನ

ಅಮೇರಿಕನ್ ಯುದ್ಧ ಹುಚ್ಚರ
ಹತ್ಯೆಯ–ಆತ್ಮ ಹತ್ಯೆಯ
ಆಟಗಳಿಗೆ
ಈ ಸುಂದರ ಭೂಮಿ
ಚೆಂಡಾಗುವ ಮುನ್ನ

ನಗುವ ಬದುಕಿನ ಮೇಲೆ
ಮರಣ ಮೌನವು ಮುಸುಕಿ
ಜೀವ ಜಾಲವ ಕೊಲ್ಲುವ
ನ್ಯೂಕ್ಲಿಯರ್ ಚಳಿಗಾಲ
ಅಡಿಯಿಡುವ ಮುನ್ನ

ಮುಗಿಲಿಗೇರಲಿ ಮುಷ್ಟಿ
ಮೂಡಿ ಬರಲಿ ವಿಶ್ವ ದೃಷ್ಟಿ
ಕ್ಷಿಪಣಿಗಳು, ಟ್ಯಾಂಕುಗಳು,
ಬಾಂಬು ಬಂದೂಕಗಳು
ಕಳೆದು ಕೊಳ್ಳಲಿ ಅದರ ಶಕ್ತಿ.

ವಿಹರಿಸಲಿ ಬಾನ ಬಯಲಲ್ಲಿ ಹಕ್ಕಿ
ಮಿನುಗುತಿರಲಿ ಮುಗಿಲಲ್ಲಿ ಚುಕ್ಕಿ
ಸಾಯದಿರಲಿ ಈ ಜೀವ ಸೃಷ್ಟಿ
ಸಾಗುತಿರಲಿ ಈ ಅನಂತ ಸೃಷ್ಟಿ.

– ಉದಯ

ಕರ್ತವ್ಯದ ಪ್ರತೀಕ ಬಿ. ನಾರಾಯಣ

(7ನೇ ಪುಟದಿಂದ)

ಆಸ್ಪತ್ರೆ ಸೇರುತ್ತಿದ್ದ ಬಿ. ನಾರಾಯಣ 7–9–86 ರಂದು ಮಂಗಳೂರಿನಲ್ಲಿ ಕೊನೆಯುಸಿರೆಳೆದರು. ಕರ್ನಾಟಕದ ಮುಖ್ಯವಾಗಿ ದ. ಕ. ಜಿಲ್ಲೆಯ ಕಾರ್ಮಿಕ ಚಳುವಳಿಗೆ, ಪಕ್ಷದ ಬೆಳವಣಿಗೆಗೆ ಇವರ ಅಗಲುವಿಕೆ ತುಂಬಲಾರದ ನಷ್ಟ ಉಂಟು ಮಾಡಿದೆ. ಬಿ ನಾರಾಯಣರಲ್ಲಿದ್ದ ತಿಳುವಳಿಕೆ, ಶಿಸ್ತು, ಧೈರ್ಯ, ಸಹನಶೀಲತೆ, ಚರ್ಚೆಯ ವೈಖರಿಗಳನ್ನು ಹೊಸ ಪೀಳಿಗೆ ನೆನೆಸಿಕೊಳ್ಳಬೇಕು, ಅನುಸರಿಸಬೇಕು. ಅನುಷ್ಠಾನದಲ್ಲಿ ತರಬೇಕು. ಅಂಥ ಗುಣಗಳನ್ನ ಳವಡಿಸಿಕೊಂಡು ಕರ್ನಾಟಕ ರಾಜ್ಯದಲ್ಲಿ ರೈತ-ಕಾರ್ಮಿಕರ ಚಳುವಳಿಯನ್ನು ವಿಸ್ತಾರಗೊಳಿಸಲು ಮುಂದಾಗಬೇಕಾಗಿದೆ.

45 ವರ್ಷಕ್ಕೂ ಮೇಲ್ಪಟ್ಟು ಪಕ್ಷಕ್ಕಾಗಿ, ರೈತ–ಕಾರ್ಮಿಕರಿಗಾಗಿ ಸೇವೆ ಸಲ್ಲಿಸಿ, ಹೋರಾಡಿ ದುಡಿದ ಬಿ. ನಾರಾಯಣ ಅವರ ಅಗಲುವಿಕೆಯಿಂದ ಉಂಟಾದ ಹಾನಿಯನ್ನ ತುಂಬಲು, ಅವರು ಸಲ್ಲಿಸಿದ ಅಪಾರ ಸೇವೆಯನ್ನು ಚಿರಾಯುವಾಗುಳಿಸಲು ಅದೊಂದೇ ಮಾರ್ಗ.

ಬಿ. ನಾರಾಯಣ ಅವರಿಗೆ ಅಪಾರ ಸಂತಾಪವನ್ನು ವ್ಯಕ್ತಮಾಡುವಾಗ ಯಾವ ಗುರಿ ಸಾಧಿಸಲು ಮೃತರು ಶ್ರಮಿಸಿದ್ದರೋ ಅದನ್ನು ಪೂರೈಸಲು ನಾವೂ ಹೋರಾಡುತ್ತೇವೆಂಬ ಪಣ ತೊಡೋಣ. ಅದುವೇ ಅಗಲಿದ ವೀರನಿಗೆ ಸಲ್ಲುವ ಗೌರವ.

ಎನ್. ಕೆ. ಉಪಾಧ್ಯಾಯ

ಸಿ ಐ ಟಿ ಯು ಕರೆ

(ಒಂದನೆ ಪುಟದಿಂದ)

ಕರ್ನಾಟಕ ರಾಜ್ಯ ಸಮಿತಿ ಎಲ್ಲಾ ಸಿ.ಐ.ಟಿ.ಯು. ಸಂಘಗಳಿಗೆ ಮನವಿ ಮಾಡಿಕೊಂಡಿದೆ. ಬೆಂಗಳೂರಿನ ಕಾರ್ಮಿಕರು 29 ರಂದು ರೈತರಿಗೆ ಊಟದ ಪೊಟ್ಟಣಗಳನ್ನು ಕೊಡುತ್ತಾರೆ ಮತ್ತು ಅವರ ಚಳುವಳಿಯಲ್ಲಿ ಭುಜಕ್ಕೆ ಭುಜ ಕೊಟ್ಟು ಬೆಂಬಲ ಕೊಡುತ್ತಾರೆ.

ಹಿಂದಿನ ಒಪ್ಪಂದಗಳು ಮುಗಿಯುತ್ತಿರುವುದರಿಂದ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಲ್ಲಿ ವೇತನ ಪುನರ್ವಿಮರ್ಶೆ ಆಗಬೇಕಾಗಿದೆ. ಬಿ.ಹೆಚ್.ಇ.ಎಲ್‌ನಲ್ಲಿ ಈಗಾಗಲೇ ಮಾತುಕತೆ ನಡೆಯುತ್ತಿದೆ. ಆಡಳಿತ ಮಂಡಳಿಗಳು ಮತ್ತು ಕೇಂದ್ರ ಸರ್ಕಾರ ಉತ್ಪಾದಕತೆಗೆ ಜೋಡಿಸಿದ ವೇತನ ಹೆಚ್ಚಳದ ಒಪ್ಪಂದಗಳಾಗಬೇಕೆಂದು ಒತ್ತಾಯಿಸಿದೆ.

ಸ್ಥಾಯೀ ನಿಯಮಗಳನ್ನು ತಿದ್ದುಪಡಿ ಮಾಡುವುದರ ಮೂಲಕ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ರಾಜಕೀಯ ಮತ್ತು ಟ್ರೇಡ್ ಯೂನಿಯನ್ ಹಕ್ಕುಗಳನ್ನು ಕಸಿದು ಕೊಳ್ಳಲಾಗುತ್ತಿದೆ. ಅರ್ಜುನ ಸೇನ್‌ಗುಪ್ತ ಸಮಿತಿಯ ವರದಿಯ ಪ್ರಕಾರ ಸಾರ್ವಜನಿಕ ಕ್ಷೇತ್ರವನ್ನು ಹೀಗಳೆಯುವುದು ಮತ್ತು ಸಾರ್ವಜನಿಕ ಕ್ಷೇತ್ರದ ಖಾಸಗೀಕರಣ ಮುಂದುವರಿಯುತ್ತಿದೆ.

ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಅಖಿಲ ಭಾರತ ಸಮಾವೇಶವು ನವದೆಹಲಿಯಲ್ಲಿ ಅಕ್ಟೋಬರ್ 18 ಮತ್ತು 19 ರಂದು ನಡೆಯುತ್ತದೆ.

ಸಾರ್ವಜನಿಕ ಕ್ಷೇತ್ರದ ಕರ್ನಾಟಕ ರಾಜ್ಯ ಸಮಾವೇಶವು ಸಿ.ಐ.ಟಿ.ಯು ಆಶ್ರಯದಲ್ಲಿ ಬೆಂಗಳೂರಿನ ಪುರ ಭವನದಲ್ಲಿ 12–10–86 ರಂದು ನಡೆಯುತ್ತದೆ. ಈ ಸಮಾವೇಶವು ಒಂದು ವಿಧದಲ್ಲಿ ಅಖಿಲ ಭಾರತ ಸಮಾವೇಶಕ್ಕೆ ಸಿದ್ಧತೆಯ ರೂಪದಲ್ಲಿರುವುದಲ್ಲದೆ ಕರ್ನಾಟಕದಲ್ಲಿರುವ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಮುಂದಿರುವ ವಿಶಿಷ್ಟ ಪ್ರಶ್ನೆಗಳನ್ನು-ಭದ್ರಾವತಿಯ ವಿ.ಐ.ಎಸ್.ಎಲ್ ಕಾರ್ಖಾನೆಯನ್ನು ಕೇಂದ್ರ ವಹಿಸಿಕೊಳ್ಳುವುದು, ಕೋಲಾರ ಚಿನ್ನದ ಗಣಿಯಲ್ಲಿ ತೆಗೆದ ಚಿನ್ನಕ್ಕೆ ಭಾರತ ಮಾರುಕಟ್ಟೆಯ ಬೆಲೆ ಕೊಡುವುದು ಸೇರಿದಂತೆ–ಎಲ್ಲಾ ಪ್ರಶ್ನೆಗಳನ್ನು ಚರ್ಚಿಸುವುದು.


ಸಿ.ಐ.ಟಿ.ಯು. ಕಾರ್ಯದರ್ಶಿ ಡಾ. ಎಂ.ಕೆ. ಪಂಧೆ ಸಮಾವೇಶದ ಮುಖ್ಯ ಅತಿಥಿಗಳಾಗಿರುತ್ತಾರೆ.

ಆರೋಗ್ಯ ಮಾರ್ಗದರ್ಶಿಗಳಿಂದ ವಿಧಾನ ಸೌಧ ಚಲೋ

ರಾಜ್ಯದ 12 ಜಿಲ್ಲೆಗಳಿಂದ ಬಂದಿದ್ದ 10 ಸಾವಿರ ಸಮುದಾಯ ಆರೋಗ್ಯ ಮಾರ್ಗದರ್ಶಿಗಳು ಆಗಸ್ಟ್ 27 ರಂದು ಬೆಂಗಳೂರಿನಲ್ಲಿ ಸಮಾವೇಶಗೊಂಡು ವಿಧಾನ ಸೌಧಕ್ಕೆ ಬೃಹತ್ ಮೆರವಣಿಗೆಯಲ್ಲಿ ತೆರಳಿ ದೇಶದ ಮೂರೂವರೆ ಲಕ್ಷ ಆರೋಗ್ಯ ಮಾರ್ಗದರ್ಶಿಗಳನ್ನು ಹಾಗೂ ರಾಜ್ಯದ 15 ಸಾವಿರ ಆರೋಗ್ಯ ಮಾರ್ಗದರ್ಶಿಗಳನ್ನು ಜುಲೈ 1 ರಿಂದ ವಜಾ ಮಾಡಿರುವುದನ್ನು ಪ್ರತಿಭಟಿಸಿ ಪ್ರದರ್ಶನ ನಡೆಸಿದರು.

ಪುರುಷ ಆರೋಗ್ಯ ಮಾರ್ಗದರ್ಶಿಗಳನ್ನು ವಜಾ ಮಾಡಿ ಮಹಿಳಾ ಆರೋಗ್ಯ ಮಾರ್ಗದರ್ಶಿಗಳನ್ನು ನೇಮಕ ಮಾಡುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆದೇಶ ಹೊರಡಿಸಿವೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಈ ಅನ್ಯಾಯದ ತೀರ್ಮಾನವನ್ನು ವಿರೋಧಿಸಿ ಆಗಸ್ಟ್ 27 ರಂದು ಬೃಹತ್ ಪ್ರತಿಭಟನಾ ಪ್ರದರ್ಶನ ನಡೆಯಿತು. ಇದರ ನೇತೃತ್ವವನ್ನು ಸಂಘದ ಅಧ್ಯಕ್ಷರಾದ ಕಾ. ವಿ. ಎನ್. ಹಳಕಟ್ಟಿ ಹಾಗೂ ಪ್ರ. ಕಾರ್ಯದರ್ಶಿಯಾದ ಕಾ. ಎಂ. ವಿ. ಕಾಳಪ್ಪನವರು ವಹಿಸಿದ್ದರು. ನಂತರ ಸಿ.ಪಿ.ಐ. (ಎಂ) ಶಾಸಕ ಕಾ. ಆರ್. ವೆಂಕಟರಾಮಯ್ಯನವರನ್ನೊಳಗೊಂಡ ನಿಯೋಗವೊಂದು ಆರೋಗ್ಯ ಸಚಿವರಾದ ಕೃಷ್ಣಪ್ಪನವರೊಂದಿಗೆ ಮಾತುಕತೆ ನಡೆಸಿತೆಂದು ಪತ್ರಿಕಾ ಹೇಳಿಕೆ ತಿಳಿಸಿದೆ.



ವೈಕೊ ಕಾರ್ಮಿಕರ ಸಂಘದಿಂದ ಬರಪೀಡಿತ ಪ್ರದೇಶಗಳ ರೈತರಿಗೆ ರಾಜ್ಯದ 5 ಜಿಲ್ಲೆಗಳ 10 ಹಳ್ಳಿಗಳಿಗೆ ಧಾನ್ಯ ಹಂಚಿಕೆ ಕಾರ್ಯಕ್ರಮ

ಮೇಲಿನ ಚಿತ್ರ : ಗುಲ್ಬರ್ಗದಲ್ಲಿ ವೈಕೊ ಕಾರ್ಮಿಕರ ಸಂಘದ ಅಧ್ಯಕ್ಷ ಹಾಗೂ ರಾಜ್ಯ ಸಿ.ಐ.ಟಿ.ಯು. ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್‌ರವರಿಂದ ಉದ್ಘಾಟನೆ. ಚಿತ್ರದಲ್ಲಿ ಪಕ್ಷದ ರಾಜ್ಯ ಸಮಿತಿ ಸದಸ್ಯ ಕಾಂ. ಹಸನ್ ಖಾನ್, ಪ್ರಾಂತ ರೈತ ಸಂಘದ ರಾಜ್ಯ ಕಾರ್ಯದರ್ಶಿ ಕಾಂ. ಕಲ್ಲಪ್ಪ ಕಿರಣಗಿಯವರೂ ಇದ್ದಾರೆ. (ವರದಿ ಹಿಂದಿನ ಸಂಚಿಕೆಯಲ್ಲಿ ಪ್ರಕಟವಾಗಿದೆ)

ಕೆಳಗಿನ ಚಿತ್ರ : ವೈಕೊ ಕಾರ್ಮಿಕರ ಸಂಘದ ಖಜಾಂಚಿ ಕಾಂ. ಶಂಕರೇಗೌಡರಿಂದ ಜೋಳ ಹಂಚಿಕೆ.

Printed & Published by P. Ramachandra Rao on behalf of the Communist Party of India [Marxist] Karnataka State Committe, K. V. Temple Street, Sultanpet, Bangalore-560053 Editorial and manageriel office: L-56, K. V. Temple Street, Sultanpet B-53 Phone : 75331 Editor P. Ramachandra Rao Managing Editor ; N. K. Upadhyaya